RECOMMENDATION OF THE COMMITTEE.

The Committee after considering the matter in the light of the Parliamentary Practice set out above recommend that the Speaker may authorise the Secretary to furnish to the Income Tax Officer a certified copy of the document asked for by him."

Sir, I also move that the House agrees with the report and I further request that the permission may be so granted.

MR. SPEAKER.—The question is :

"That this House agrees with the First Report of the Committee of Privileges."

The Motion was adopted

Financial Business : Discussion as Voting of Demands for Grants for 1980-81.

Demand Nos. 56, 57 and 58.

MR. SPEAKER.—Now we shall take up the next item, the Hon'ble Minister for Rural Development Panchayath to reply.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಪ್ರಭಾಕರ್‌ರವರು ಕಳೆದ ಎರಡು ದಿನಗಳಿಂದ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಇದ್ದರು. ಆದ ಕಾರಣ ಅವರಿಗೆ ೧೦ ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡಿ ; ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು.—ಈ ಸಭೆಯ ನಿಯಮ ಏನು ಎಂಬುದು ತಮಗೆ ಗೊತ್ತಿದೆ. 'ಇಲ್ಲಿಗೆ ಚರ್ಚೆ ಮುಗಿಯಿತು, ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದು' ಎಂದು ನಿನ್ನೆಯೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆದ್ದರಿಂದ, ಅವರು ಬೇಕಾದರೆ ಬೇರೆ ಬೇಡಿಕೆಗಳ ಮೇಲೆ ಮಾತನಾಡಲಿ.

ಶ್ರೀ ಎಂ. ಸಿ. ನಾಣಯ್ಯ.—ಅವರು ಹಿಂದೆ ಈ ಖಾತೆಯ ಮಂತ್ರಿಗಳಾಗಿದ್ದುದರಿಂದ ಅವರಿಗೆ ಇದರ ಬಗ್ಗೆ ಹೆಚ್ಚಿನ ಆಸಕ್ತಿ ಇದೆ. ಆದ ಕಾರಣ, ಕೇವಲ ೧೦ ನಿಮಿಷಗಳಾದರೂ ಅವಕಾಶ ಕೊಡಿ.

ಅಧ್ಯಕ್ಷರು.—ಕೆಲವರೆಲ್ಲ ೪೦-೫೦ ನಿಮಿಷಗಳ ಕಾಲ ಮಾತನಾಡಿದ್ದೀರಿ ; ಅದರಲ್ಲೇ ಸ್ವಲ್ಪ ಕಾಲಾವಕಾಶವನ್ನು ಅವರಿಗೂ ಕೊಡಬಹುದಾಗಿತ್ತು. ಏಕೆ ಕೊಡಲಿಲ್ಲ ? ಸಭೆ, ಈ ಮನೆಯ ನಿಯಮಾವಳಿ ಪ್ರಕಾರ ನಡೆಯಬೇಕು. ನಾನು ನಿನ್ನೆ ಏನು ಹೇಳಿದ್ದೇನೆಂಬುದನ್ನು ಬೇಕಾದರೆ ರೆಕಾರ್ಡ್‌ನಲ್ಲಿ ನೋಡಿ.

ಶ್ರೀ ವೈ. ರಾಮಕೃಷ್ಣ.—ತಾವು ನಿನ್ನೆ, ಹೇಳಿದ್ದೀರಿ ಇಲ್ಲಿಗೆ ಚರ್ಚೆ ಮುಗಿಯಿತು, ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಎಂದು ತಾವು ಆದೇಶ ನೀಡಿದ್ದೀರಿ. ಆದ್ದರಿಂದ, ಆ ಪ್ರಕಾರ ಮಾನ್ಯ ಮಂತ್ರಿಗಳು ಈಗ ಉತ್ತರ ನೀಡುವುದು ಸೂಕ್ತವಾಗಿದೆ.

ಅಧ್ಯಕ್ಷರು.—ಅವರು ಕೊಟ್ಟಿದ್ದ ಪಟ್ಟಿಯಲ್ಲಿ ಮಾನ್ಯ ಪ್ರಭಾಕರ್‌ರವರ ಹೆಸರು ಕೂಡ ಇರಲಿಲ್ಲ. ಆದರೂ ಪುನಃ ಕೇಳುತ್ತಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ.—ಅವರು ಮಧ್ಯಾಹ್ನ ಬಂದರು, ಬೆಳಗ್ಗೆ ಇರಲಿಲ್ಲ.

ಅಧ್ಯಕ್ಷರು.—ಲಿಸ್ಟ್‌ನಲ್ಲಿ ಅವರ ಹೆಸರನ್ನು ಸೇರಿಸದೆ ಕೊಡಿ ಎಂದರೆ ಹೇಗೆ ?

ಶ್ರೀ ಎಂ. ಸಿ. ನಾನಯ್ಯ.—ನಿನ್ನೆ ಮಾನ್ಯ ಮಾಯಣ್ಣನವರು ಮಾತನಾಡಲಿಲ್ಲ, ಅವರ ಬದಲಿಗೆ ಮಾನ್ಯ ಪ್ರಭಾಕರ್‌ರವರಿಗೆ ಕೊಡಿ.

ಅಧ್ಯಕ್ಷರು.—ಮಾನ್ಯ ಮಾಯಣ್ಣನವರ ಹೆಸರನ್ನು ಸಹ ಕೊಟ್ಟಿಲ್ಲ ; ಅದರಲ್ಲಿ ಇದ್ದದ್ದು ಮಾನ್ಯ ಶಿವನಂಜಪ್ಪನವರದ್ದೇ ಕೊನೆಯ ಹೆಸರು.

ಶ್ರೀ ಜಿ. ಪಿ. ಒಡೆಯರಾಜ್.—ಸಂಪ್ರದಾಯದ ಪ್ರಕಾರ ವಿರೋಧ ಪಕ್ಷದವರು.........

(ಸಭೆಯಲ್ಲಿ ಗೊಂದಲ)

(ಮಾನ್ಯ ಅಧ್ಯಕ್ಷರು : Dont record)

*   *   *

ಶ್ರೀ ಕೆ. ಭಾಸ್ಕರ್‌ನಾಯ್ಡು.—ಹೊರಗಡೆ ಕೂರುವುದಕ್ಕೂ ಜಾಗವಿಲ್ಲ, ಅಷ್ಟು ಜನ ತುಂಬಿದ್ದಾರೆ,

ಅಧ್ಯಕ್ಷರು.—ಒಬ್ಬರನ್ನೂ ಬರದ ಹಾಗೆ ಮಾಡಬೇಕೆ ಹೇಳಿ.

ಶ್ರೀ ಜಿ. ಪಿ. ಒಡೆಯರಾಜ್.—ಈ ಗ್ರಾಮಾಭಿವೃದ್ಧಿ ವಿಚಾರ ಮೊನ್ನೆಯೇ ಮುಗಿಯ ಬೇಕಾಗಿತ್ತು; ಈಗಾಗಲೇ ೨-೩ ದಿವಸ ತಡವಾಗಿದೆ. ಮಾನ್ಯ ಅಧ್ಯಕ್ಷರು ಮಾನ್ಯ ಮಂತ್ರಿಗಳನ್ನು ಉತ್ತರ ಕೊಡಲಿಕ್ಕೆ ಕರೆದಿದ್ದಾರೆ. ಒಂದು ವೇಳೆ ಅವರಿಗೇನಾದರೂ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ನಮ್ಮ ಕಡೆ ಕೂಡ ಮಾತನಾಡುವವರು ಇದ್ದಾರೆ. ಒಂದು ಸಾರಿ ರೀ ಓಪನ್ ಆದರೆ ಸಂಜೆಯವರೆಗೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಆ ಕಡೆಯವರಿಗೆ ಕೊಟ್ಟರೆ ನಮ್ಮ ಕಡೆಯವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಈಗ ಆ ಕಡೆ, ಈ ಕಡೆ ಎಂದು ಕಾಲ ಕಳೆಯುವುದು ಬೇಡ. ನಿನ್ನೆ ದಿವಸ ಚರ್ಚೆಯನ್ನು ಮುಕ್ತಾಯಗೊಳಿಸಿರುವುದು ನಿಜ. ಆದರೆ ಮಾನ್ಯ ಪ್ರಭಾಕರ್‌ರವರು ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳಾಗಿದ್ದರು, ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲೇಬೇಕಾಗಿತ್ತು, ಆದ್ದರಿಂದ, ತಾವು ಈ ಕಡೆ ೧೦ ನಿಮಿಷ ಮತ್ತು ಆ ಕಡೆ ೧೦ ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ವೈ. ರಾಮಕೃಷ್ಣ.—ನಿನ್ನೆ ಮಾನ್ಯ ಅಧ್ಯಕ್ಷರು ಚರ್ಚೆ ಮುಗಿದಿದೆ ಎಂದು ಹೇಳಿ ಈಗ ಮಾನ್ಯ ಮಂತ್ರಿಗಳನ್ನು ಉತ್ತರ ಕೊಡುವುದಕ್ಕೆ ಕರೆದಿರುವಾಗ ಪುನಃ ರೀ ಓಪನ್ ಮಾಡುವುದು ಸರಿಯೆ ?

ಶ್ರೀ ಬಿ. ಬಸವಲಿಂಗಪ್ಪ.—ರೀ ಓಪನ್ ಮಾಡುವುದಕ್ಕೆ ಸದನಕ್ಕೆ ಹಕ್ಕು ಇದೆ. ಗ್ರಾಮಾಭಿವೃದ್ಧಿ ಮಂತ್ರಿಗಳಾಗಿದ್ದವರು ೪ ಮಾತುಗಳನ್ನು ಆಡುವುದಕ್ಕೆ ಏನು ತೊಂದರೆ ಇದೆ ?

ಒಬ್ಬರು ಮಾನ್ಯ ಸದಸ್ಯರು.—ಅವರು ಮಂತ್ರಿಗಳಾಗಿದ್ದಾಕ್ಷಣಕ್ಕೆ ಈಗ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಏನು ಇಲ್ಲ.

ಅಧ್ಯಕ್ಷರು.—ನಿನ್ನೆ ೪ ಜನರ ಹೆಸರನ್ನು ಕಳುಹಿಸಿಕೊಟ್ಟಿದ್ದೀರಿ, ಅವರು ಮಾತನಾಡಿದರು. ಅವರ ಜೊತೆಯಲ್ಲಿ ಇವರದ್ದನ್ನೂ ಕಳುಹಿಸಿಕೊಡಬಹುದಾಗಿತ್ತು. ಅಲ್ಲದೆ ಅವರು ಗ್ರಾಮಾಭಿವೃದ್ಧಿ ಮಂತ್ರಿಗಳಾಗಿದ್ದರು ಎಂದು ಅವರಿಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬಹುದಾಗಿತ್ತು. ಆದರೆ ಏಕೆ ಆ ರೀತಿ ಮಾಡಲಿಲ್ಲ ? ಆದ್ದರಿಂದ, ಕ್ಷಮಿಸಬೇಕು ; ಈಗ ಖಂಡಿತ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಗ್ರಾಮಾಭಿವೃದ್ಧಿ ಮಂತ್ರಿಗಳು ಎಂದು ಹೇಳುತ್ತಿದ್ದಾರೆ. ಆದರೆ ಮೊದಲೇ ಏಕೆ ಅವರ ಹೆಸರನ್ನು ಕೊಡಲಿಲ್ಲ ?

ಶ್ರೀ ಎಂ. ಸಿ. ನಾನಯ್ಯ.—ನಿನ್ನೆ ಬೆಳಿಗ್ಗೆ ಪಟ್ಟಿಯನ್ನು ಕೊಟ್ಟಾಗ ಮಾನ್ಯ ಪ್ರಭಾಕರ್‌ರವರು ಸಭೆಯಲ್ಲಿರಲಿಲ್ಲ. ಅವರು ಮಧ್ಯಾಹ್ನ ಬಂದ ಮೇಲೆ ಎರಡನೇ ಪಟ್ಟಿಯಲ್ಲಿ ಅವರ ಹೆಸರನ್ನು ಕೊಟ್ಟಿದ್ದೇವೆ. ಹೆಸರನ್ನು ಕೊಡಲಿಲ್ಲವೆಂಬ ಪ್ರಶ್ನೆ ಇಲ್ಲ.

*** As directed by the chair, the matter was not recored.

೧೧-೩೦ ಎ. ಎಂ.

ಶ್ರೀ ವೈ ರಾಮಕೃಷ್ಣ.—ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಪ್ರಭಾಕರ್ ಅವರು ಮಂತ್ರಿಗಳಾಗಿದ್ದರಿಂದ ಅನುಭವಗಳಿರುತ್ತವೆ, ಅವರು ಮಾತನಾಡಬೇಕು ಎಂದು ಹೇಳುತ್ತಾರೆ. ಅವರ ಹೆಸರನ್ನು ಮೊದಲೇ ಕೊಟ್ಟಿದ್ದರೆ ನಾವು ಬೇಡ ಎಂದು ಹೇಳುತ್ತಿರಲಿಲ್ಲ. ಮಾನ್ಯ ಅಧ್ಯಕ್ಷರು ಚರ್ಚೆ ಮುಗಿದಿದೆ ಎಂದು ಹೇಳಿ ಮಾನ್ಯ ಮಂತ್ರಿಗಳನ್ನು ಉತ್ತರ ಕೊಡುವುದಕ್ಕೆ ಹೇಳಿದ ಮೇಲೆ ಮತ್ತೆ ಅವಕಾಶ ಕೊಡಿ ಎಂದು ಹೇಳಿದರೆ ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ.

MR. SPEAKER —The discussion is already concluded. Now, I call the Hon'ble Minister to reply.

(ನಾಲ್ಕಾರು ಜನ ಒಟ್ಟಿಗೆ ಮಾತನಾಡಿದರು-ಗೊಂದಲ)

ಶ್ರೀ ಆರ್. ಗುಂಡೂರಾವ್.—ಈಗ ಸಮಗಿರುವುದೇ ಮೂರು ದಿವಸ. ಮೂರು ದಿವಸಗಳಲ್ಲಿ ಅನೇಕ ಮುಖ್ಯವಾದ ಬೇಡಿಕೆಗಳನ್ನು ಪಾಸ್ ಮಾಡಬೇಕಾಗಿದೆ. ಲೋಕಸಭೆಯಲ್ಲಿ ೨೫ ಡಿಮ್ಯಾಂಡ್‌ಗಳನ್ನು ಸೇರಿಸಿ ಗಿಲ್‌ಟನ್ ಮಾಡಿ ಪಾಸ್ ಮಾಡಿದರು. ನಾವೂ ಅದೇ ರೀತಿ ಮಾಡಬೇಕಾಗುತ್ತದೆ. There is no other go. This is not correct. Sri Prabhakar could have been given a chance to speak by withdrawing one member yesterday only. The Hon'ble Members are aware of many demands that are to be discussed still. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಎದ್ದು ನಿಂತಿದ್ದಾರೆ. ಈಗ ಒಬ್ಬೊಬ್ಬರು ೧೦ ನಿಮಿಷ ಟೈಂ ಕೇಳಿದರೆ ಸಾಧ್ಯವಾಗುವುದಿಲ್ಲ. ತುಂಬಾ ತೊಂದರೆಯಾಗುತ್ತದೆ.

SRI AZEEZ SAIT.—My humbly submission to the Hon'ble Chief Minister is to give a chance to Sri Prabhakar whose name has been ignored and do justice.

ಶ್ರೀ ಆರ್. ಗುಂಡೂರಾವ್.—ಎಲ್ಲರೂ ಮಾತನಾಡಬೇಕು ಎಂದರೆ ಕಷ್ಟವಾಗುತ್ತದೆ. Let him take a chance to speak first on the next demand.

ಶ್ರೀ ಕೆ. ಭಾಸ್ಕರನಾಯಿಡು.—ಮಾನ್ಯ ಪ್ರಭಾಕರ್ ಅವರು ಎರಡೂವರೆ ವರ್ಷ ಮಂತ್ರಿಗಳಾಗಿದ್ದಾಗ ಮಾಡಿದ ಕಮಿಷನ್ ಮತ್ತು ಒಮಿಷನ್‌ಗಳನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಕೊಡಬೇಕೆ ? ಅವರು ಮಾತನಾಡಬೇಕು ಎಂದರೆ ಈ ಕಡೆಯೂ ಮಾತನಾಡುವವರಿದ್ದಾರೆ. ಕೆ. ಎಸ್. ಆರ್. ಟಿ. ಸಿ. ವಿಷಯ ಬಂದರೆ ಅಜೀಜ್ ಸೇಠ್‌ರವರು ಎಗರಿ ಎಗರಿ ಮಾತನಾಡುವುದು, ರೆವಿನ್ಯೂ ಡಿಪಾರ್ಟ್‌ಮೆಂಟ್ ವಿಷಯ ಬಂದರೆ ಬಸವಲಿಂಗಪ್ಪನವರು ಕುಣಿದು ಕುಣಿದು ಮಾತನಾಡುವುದು, ಏನಿದು ?

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಭಾಸ್ಕರ ನಾಯಿಡು ಅವರು ಮಾತನಾಡಿದ ಧಾಟಿ ಏನಿದೆ ಅದು ಸರಿಯಿಲ್ಲ. ಅವರು ಆ ರೀತಿ ಮಾತನಾಡಬಾರದು. ಮಾನ್ಯ ಪ್ರಭಾಕರ್ ಅವರು ಮಾತನಾಡುವುದು ಬೇಡ ಎಂದರೆ ಬೇಡ, ಅವರೇ ಮಾತನಾಡಿಕೊಳ್ಳಲಿ ; ಅದು ಬೇರೆ ವಿಚಾರ. ಆದರೆ ಮಾನ್ಯ ಗುಂಡೂರಾಯರು ಏನು ಹೇಳಿದ್ದಾರೆಂದರೆ......

ಶ್ರೀ ಅಜೀಜ್ ಸೇಠ್.—ಮಾನ್ಯ ಭಾಸ್ಕರ ನಾಯಿಡು ಅವರು ಆ ರೀತಿ ಮಾತನಾಡಿದ್ದು ಸರಿಯೇ ? ದಯವಿಟ್ಟು ಮಾನ್ಯ ಅಧ್ಯಕ್ಷರು ರೆಕಾರ್ಡ್ ತೆಗೆಸಿ ನೋಡಬೇಕು.

ಅಧ್ಯಕ್ಷರು.—ನಾನು ಖಂಡಿತ ನೋಡುತ್ತೇನೆ.

SRI K. BHASKAR NAIDU.—I have not used any unparliamentary language. They claim as seniors in the House.

(Interruptions)

MR. SPEAKER.—Please don't record.

*   *   *

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಮಹಾಸಭೆಯಲ್ಲಿ ಮಾತನಾಡುವಾಗ ಸಂಸದೀಯ ಪದ್ಧತಿ ಪ್ರಕಾರ ಮಾತನಾಡಬೇಕು. ಒಟ್ಟಿಗೆ ಹಲವಾರು ಸದಸ್ಯರು ಎದ್ದುನಿಂತು ಮಾತನಾಡಿದರೆ ಹೇಗೆ? ಸದಸ್ಯರಿಗೆ ಅಷ್ಟೂ ಗೊತ್ತಿಲ್ಲವೇ ?

ಶ್ರೀ ಬಿ. ಭಾಸ್ಕರ ನಾಯಿಡು.—ಮಾನ್ಯ ಪ್ರಭಾಕರ್ ಅವರು ಮಾಜಿ ಮಂತ್ರಿಗಳು, ಅವರು ಭಾಷಣ ಮಾಡಬೇಕು ಎಂದು ಹೇಳುತ್ತಿದ್ದಾರೆ.

(ಗೊಂದಲ)

MR. SPEAKER.—Please don't record.

*   *

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಸಮಯ ಇಲ್ಲದೇ ಹೋದರೆ ಗಿಲೆಟಿನ್ ಮಾಡಿ ಮುಗಿಸಬೇಕಾಗುತ್ತದೆ ಎಂದು. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಈಗಾಗಲೇ ಹೇಳಿದ ಹಾಗೆ ಚರ್ಚೆ ಮುಗಿದು ಮಾನ್ಯ ಮುಖ್ಯಮಂತ್ರಿಗಳನ್ನು ಉತ್ತರ ಕೊಡುವುದಕ್ಕೆ ಕರೆದಿತ್ತು. ಆ ಸಂದರ್ಭದಲ್ಲಿ ಶ್ರೀಮಾನ್ ಪ್ರಭಾಕರ್ ಅವರು ಮಾತನಾಡಬೇಕೆಂದು ಎದ್ದುನಿಂತರು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಆಗಲಿಲ್ಲ. ದಯಮಾಡಿ ೧೦ ನಿಮಿಷ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಬೇರೆ ಡಿಮ್ಯಾಂಡ್ ಮೇಲೆ ಬೇಕಾದರೆ ಒಬ್ಬರನ್ನು ತೆಗೆದುಹಾಕಿ ೧೦ ನಿಮಿಷ ಅಡ್ಜಸ್ಟ್ ಮಾಡೋಣ. ಎಲ್ಲಾ ಸದಸ್ಯರೂ ವಿರೋಧಪಕ್ಷದ ಕಡೆಯಿಂದ ಮಾನ್ಯ ಪ್ರಭಾಕರ್ ಅವರಿಗೆ ಅವಕಾಶ ಕೊಡಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಅವರಿಗೆ ಮಾತನಾಡುವುದಕ್ಕೆ ೧೦ ನಿಮಿಷ ಅವಕಾಶ ಕೊಡುವುದು ಸೂಕ್ತ ಎಂದು ನನಗನ್ನಿಸುತ್ತದೆ. ಅವರು ಏನು ಮಾತನಾಡುತ್ತಾರೋ ಕೇಳೋಣ.

ಅಧ್ಯಕ್ಷರು.—ಯಾರಿಗೂ ಅವಕಾಶ ಕೊಡುವುದಿಲ್ಲ. ಮಾನ್ಯ ಬೇಗಾನೆ ರಾಮಯ್ಯನವರು ಉತ್ತರವನ್ನು ಪ್ರಾರಂಭ ಮಾಡಲಿ.

(ಮತ್ತೆ ಹಲವಾರು ಸದಸ್ಯರು ಮಾತನಾಡತೊಡಗಿದರು).

ಶ್ರೀ ಬಿ. ಬಸವಲಿಂಗಪ್ಪ.—ವಿರೋಧಪಕ್ಷದವರ ಮಾತಿಗೆ ಸ್ವಲ್ಪವೂ ಬೆಲೆ ಕೊಡದಿದ್ದರೆ ಹೇಗೆ ? ಎಲ್ಲರೂ ಕೇಳಿಕೊಳ್ಳುತ್ತಿದ್ದಾರೆ. ೧೦ ನಿಮಿಷ ಕೊಟ್ಟರೆ ಏನು ತೊಂದರೆಯಾಗುತ್ತದೆ ?

ಅಧ್ಯಕ್ಷರು—ವಿರೋಧಪಕ್ಷದವರ ಮಾತಿಗೆ ಬೆಲೆ ಕೊಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಪರಿಸ್ಥಿತಿಯನ್ನು ನೋಡಿಕೊಂಡು ಮಾತನಾಡಬೇಕು, ನಾನು ಈ ಸ್ಥಾನದಲ್ಲಿ ಕುಳಿತುಕೊಂಡು ನ್ಯಾಯವಾಗಿ ನಡೆದುಕೊಳ್ಳಬೇಕು. ನಾನು ವಿರೋಧಪಕ್ಷದವರ ಮಾತಿಗೆ ಬೆಲೆ ಕೊಡಬಾರದು ಎಂಬ ಉದ್ದೇಶವಿಲ್ಲ. ಬರೀ ವಿರೋಧಪಕ್ಷದವರ ಮಾತನ್ನೇ ಕೇಳುವುದಕ್ಕಾಗುವುದಿಲ್ಲ ಇಡೀ ಸಭೆಯ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದರ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.

SRI B. BASAVALINGAPPA. By this time, the discussion would have been over, if Sri Prabhakar had been given a chance. Unnecessariy the time has been lost in exchanges. I request the Speaker kindly to give a chance to Sri Prabhakar to speak for 10 minutes.

** As directed by the Chair the matter was not recordes.

ಶ್ರೀ ಟಿ. ಬಿ. ಜಯಚಂದ್ರ.—ಅವರೊಬ್ಬರಿಗೆ ಅವಕಾಶ ಕೊಟ್ಟರೆ ಈ ಕಡೆ ನಾಲ್ಕು ಜನರಿಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಸಭಾ ನಾಯಕರೂ ಒಪ್ಪಿದರೆ ವಿರೋಧಪಕ್ಷದವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಅವರು ಒಪ್ಪುವುದಿಲ್ಲ ಎಂದರೆ ಖಾಲಿ ಖರ್ಚಿಗಳಿಗೇ ಉತ್ತರ ಕೊಡಲಿ. ನಾವು ಯಾರೂ ಇರುವುದಿಲ್ಲ.

ಅಧ್ಯಕ್ಷರು.—ನೀವು ಹಾಗೆ ಹೇಳಿದರೆ ಹೇಗೆ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ವಿರೋಧಪಕ್ಷದ ಉಪನಾಯಕರು ಏನು ಹೇಳುತ್ತಿದ್ದಾರೆ ಅದು ಸರಿಯಲ್ಲ. ಇಷ್ಟು ಸಣ್ಣ ವಿಷಯಕ್ಕೆ ಆ ರೀತಿ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ. ಒಂದು ವೇಳೆ ಅವರು ಆ ರೀತಿ ನಿರ್ಣಯ ತೆಗೆದುಕೊಳ್ಳುವುದಾದರೆ ಅದು ಅವರಿಗೆ ಬಿಟ್ಟಿದ್ದು. ಮಾನ್ಯ ಬಸವಲಿಂಗಪ್ಪನವರು ಬಹಳ ಹಳಬರು ಅನುಭವಸ್ಥರು. ಅವರು ಇಷ್ಟು ಬೇಗ ಇಷ್ಟೊಂದು ದೊಡ್ಡ ಅಸ್ತ್ರವನ್ನು ಉಪಯೋಗಿಸುತ್ತಾರೆ ಎಂದು ನಾನು ಅಂದುಕೊಂಡಿರಲಿಲ್ಲ. ವಿರೋಧಪಕ್ಷದವರಿಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶ ಕೊಟ್ಟು ನಿನ್ನೆ ದಿವಸ ಚರ್ಚೆ ಮುಗಿಸಿ ಇವತ್ತು ಮಾನ್ಯ ಮಂತ್ರಿಗಳ ಉತ್ತರ ಪ್ರಾರಂಭವಾಗಬೇಕು ಎಂದು ತೀರ್ಮಾನ ಮಾಡಿರುವಾಗ ಪುನಃ ೧೦ ನಿಮಿಷ ಕೊಡಿ ಎಂದು ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರುಗಳು they must also know the timings of the business of the House. ಇನ್ನೂ ಅನೇಕ ಮುಖ್ಯ ಬೇಡಿಕೆಗಳು ಸಭೆಯ ಮುಂದೆ ಬರುತ್ತಿವೆ. ಅದಕ್ಕೆಲ್ಲಾ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೇ ಖಾಲಿ ಖರ್ಚಿಗಳಿಗೆ ಉತ್ತರ ಕೊಡಿ ಎಂದು ಹೇಳುವುದು ಸರಿಯಲ್ಲ. That will not be appreciated by anybody because it has been decided Mr. Speaker has stated that the Hon'ble Minister is going to reply today morning and the Minister is ready to reply to the debate now.

ಮಾನ್ಯ ಬಸವಲಿಂಗಪ್ಪನವರು ಏನೋ ಪ್ರೀತಿ ಮೇಲೆ ಮಾನ್ಯ ಪ್ರಭಾಕರ್ ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿದರು. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಚರ್ಚೆ ಮುಗಿದ ಮೇಲೆ ಪುನಃ ಅವಕಾಶ ಕೊಡಿ, ಇಲ್ಲದಿದ್ದರೆ ನಮಗೆ ಮಂತ್ರಿಗಳ ಉತ್ತರ ಬೇಡ ಎಂದು ಹೇಳಿದರೆ ಹೇಗೆ ? ಹೀಗೆ ಒಬ್ಬೊಬ್ಬರಿಗೆ ೧೦–೧೦ ನಿಮಿಷ ಕೊಡುತ್ತಾ ಹೋದರೆ ಇದಕ್ಕೆ ಕೊನೆ ಎಲ್ಲಿ ? ಅವರು ಬೇಕಾದರೆ ಬೇರೆ ಬೇಡಿಕೆಯ ಮೇಲೆ ಮಾತನಾಡಲಿ. ಮುಂದಿನ ಬೇಡಿಕೆಯ ಮೇಲೆ ಮಾತನಾಡುವಾಗ ಬೇಕಾದರೆ ಅವರಿಗೇ ಮೊದಲನೇ ಅವಕಾಶ ಕೊಡಲಿ. ಆದ್ದರಿಂದ ಈಗಾಗಲೇ ಇವತ್ತು ಮಾನ್ಯ ಮಂತ್ರಿಗಳ ಉತ್ತರ ಪ್ರಾರಂಭವಾಗಬೇಕು ಎಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಸತ್‌ಸಂಪ್ರದಾಯವನ್ನು ಮುರಿಯುವುದು ಬೇಡ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜಿ.ಎ.ಡಿ. ಡಿಮ್ಯಾಂಡ್ ಬಂದಾಗ ಬೇಕಾದರೆ ಅವರು ಮಾತನಾಡಲಿ. I request the Hon'ble Opposition members to allow the Minister to give his reply. On other demands the Hon'ble members will have opportunity to speak. This is what I want to submit at this stage.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ಉತ್ತರ ಕೊಡುತ್ತೇನೆ. ಅದಕ್ಕೆ ದಯವಿಟ್ಟು ಎರಡು ನಿಮಿಷ ಅವಕಾಶ ಕೊಡುತ್ತೀರಾ ?

ಅಧ್ಯಕ್ಷರು.—ಒಂದು ನಿಮಿಷವೂ ಅವಕಾಶ ಕೊಡುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಎರಡು ನಿಮಿಷ ಕೊಡಿ.

MR. SPEAKER.—When the Leader of the House says so, I cannot say no, I have to stick to it. I respect the suggestion of the Hon.

Leader of the Opposition and at the same time I should also respect the suggestion made by the Leader of the House. Now, I call upon the Minister for Rural Development and Panchayat Raj to reply.

SRI K. PRABHAKAR.—It is a great insult to the opposition members.

MR SPEAKER.—I have to respect the wishes of the Leader of the House.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಂಡಿಸಿರತಕ್ಕ ಬೇಡಿಕೆಯ ಮೇಲೆ...

Interruptions

SRI K. PRABHAKAR.—I have no confidence in the righteous exercise of the Minister.

MR. SPEAKER.—When the Hon'ble Leader of the House says, I have to respect his wishes. ಬಹುಮತದ ಪ್ರಕಾರ ಯಾವಾಗಲೂ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಮಂಡಿಸಿರತಕ ಬೇಡಿಕೆಗಳ ಮೇಲೆ ಮಾನ್ಯ ವಿರೋಧಪಕ್ಷದ...

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ...

ಶ್ರೀ ಬೇಗಾನೆ ರಾಮಯ್ಯ.—ನಾನು ಈಲ್ಡ್ ಆಗಿಲ್ಲ...

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಹೇಳುವುದೇನೆಂದರೆ...

ಶ್ರೀ ಬೇಗಾನೆ ರಾಮಯ್ಯ.—ನಾನು ಮಾತನಾಡಲು ಎದ್ದು ನಿಂತಿದ್ದೇನೆ.

SRI K PRABHAKAR.—Sir, I raise a point of order. ಈ ಸಾರಿ ಅಧಿವೇಶನದಲ್ಲಿ ನನಗೆ ಮಾತನಾಡುವುದಕ್ಕೆ ಒಂದು ದಿವಸವೂ ಅವಕಾಶ ಕೊಡಲಿಲ್ಲ.

MR.—SPEAKER.—You must quote the rule under which you want to raise a point of order.

ಶ್ರೀ ಕೆ. ಪ್ರಭಾಕರ್.—ನಾನು ಏನು ಹೇಳುತ್ತೇನೆ ಎಂಬುದನ್ನು ಕೇಳಿ. ಆಮೇಲೆ ನೀವು ಏನು ಬೇಕಾದರೂ ಹೇಳಿ. ನನಗೆ ಹೇಳುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ. ಈ ಅಧಿವೇಶನ ಪ್ರಾರಂಭವಾದಂದಿನಿಂದ ಒಂದು ದಿವಸವೂ ನನಗೆ ಮಾತನಾಡುವುದಕ್ಕೆ ಅವಕಾಶವಾಗಲಿಲ್ಲ. ಕೆಲವು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಬಜೆಟ್ ಮೇಲೆ ಮಾತನಾಡಲಿಲ್ಲ. ಮತ್ತೆ ೫-೬ ವಿಷಯಗಳ ಬಗ್ಗೆ ನೋಟ್ಸ್ ಹಾಕಿಕೊಂಡುಬಂದು ಮಾತನಾಡಬೇಕು ಎಂದು ಮನಸ್ಸು ಮಾಡಿದರೂ ತಮ್ಮ ಮನಸ್ಸಿಗೆ ಏನು ಬಂತೋ ನನಗೆ ಅವಕಾಶ ಕೊಡಲಿಲ್ಲ. ಅಥವಾ ಅವಕಾಶ ಸಿಕ್ಕಲಿಲ್ಲ. ಮೊನ್ನೆ ಒಂದು ಸಲ ಒಂದು ಸಭೆಯಲ್ಲಿ ಸೇರಿದ್ದಾಗ ಮಾನ್ಯ ಸಂಸದೀಯ ವ್ಯವಹಾರಗಳ ಖಾತೆ ಮಂತ್ರಿಗಳಾದ ಶ್ರೀಮಾನ್ ವೈ. ರಾಮಕೃಷ್ಣ ಅವರು ನನಗೆ ಏನು ಹೇಳಿದರು ಎಂದರೆ ನೀವು ಈ ಕಡೆ ಇದ್ದರೂ ಒಂದೇ, ಆ ಕಡೆ ಇದರೂ ಒಂದೇ. ಸುಮ್ಮನೆ ಎಲ್ಲೋ ಒಂದು ಕಡೆ ಇರಿ...

ಶ್ರೀ ವೈ. ರಾಮಕೃಷ್ಣ.—ಇದೇನು ಸ್ವಾಮಿ, ಏನೇನೋ ಹೇಳುತ್ತಿದ್ದಾರಲ್ಲ ?

ಶ್ರೀ ಕೆ. ಪ್ರಭಾಕರ್.—ನೀವು ಹೇಳಿದ್ದನ್ನೇ ಹೇಳುತಿದ್ದೇನೆ. ಮೊನ್ನೆ ಒಂದು ಸಭೆಯಲ್ಲಿ ಸೇರಿದ್ದಾಗ ಮಾನ್ಯ ರಾಮಕೃಷ್ಣ ಅವರೇ ಹೇಳಿದರು, ನೀವು ಅನುಭವಸ್ಥರು, ಒಳ್ಳೆಯ ಸಲಹೆಗಳನ್ನು ಕೊಡುತ್ತೀರಿ. ನಿಮಗೆ ಒಳ್ಳೆಯ ಕೆಲಸ ಮಾಡುವ ಶಕ್ತಿ ಇದೆ ಎಂದು ನನಗೆ ಹೇಳಿದರು ದಿನಾಂಕ ೨-೧೦-೧೯೭೯ರಲ್ಲಿ ಗಾಜಿನ ಮನೆಯಲ್ಲಿ ಒಂದು ಸಭೆ ನಡೆದಾಗ...

ಶ್ರೀ ಡಿ.ಟಿ. ರಾಮು.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ನಮಗೆ ಅರ್ಥವಾಗುತ್ತಿಲ್ಲ. ವಿಷಯ ಇರುವುದು ಯಾವುದು, ಅವರು ಮಾತನಾಡುತ್ತಿರುವುದು ಯಾವುದು ಎಂಬುದನ್ನು ದಯವಿಟ್ಟು ನೋಡಬೇಕು.

ಶ್ರೀ ಕೆ. ಪ್ರಭಾಕರ್.—ನಾನು ಹಲವಾರು ಸಲಹೆಗಳನ್ನು ಸಭೆಗೆ ಕೊಡಬೇಕು ಎಂಬ ಉದ್ದೇಶದಿಂದ ಬರೆದುಕೊಂಡುಬಂದಿದ್ದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ ನಿನ್ನೆಯೇ ತೀರ್ಮಾನವಾಗಿರುವುದರಿಂದ ನನಗೆ ಅವಕಾಶ ಕೊಡುವುದು ಬೇಡ ಎಂದು ಹೇಳಿದರು. ನನ್ನ ಹೆಸರನ್ನೂ ನಮ್ಮ ಕಡೆಯಿಂದ ಕಳಿಸಿದ್ದರು. ನಾನು ಮಾತನಾಡುವುದಕ್ಕೆ ಸಿದ್ಧವಾಗಿದ್ದೆ. ಆದರೆ ನನ್ನನು ಕರೆಯಲಿಲ್ಲ.

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಹೇಳಿ.

ಶ್ರೀ ಕೆ. ಪ್ರಭಾಕರ್.—ನಾನು ಇವತ್ತು ಎಲ್ಲಾ ಸಿದ್ಧತೆ ಮಾಡಿಕೊಂಡು ಮಾತನಾಡುವುದಕ್ಕೋಸ್ಕರ ಮುಂಚೆಯೇ ಬಂದರೂ ನನಗೆ ಅವಕಾಶಕೊಡಲಿಲ್ಲ. My Point of order is this: The fundamental right of the member to speak in the House is curtailed. ಈ ರೀತಿ ವಿಚಿತ್ರ ಸನ್ನಿವೇಶ ಏತಕ್ಕೆ ಬಂತು ? ನನಗೆ ಅವಕಾಶ ಕೊಟ್ಟಿದ್ದರೆ ಒಂದೆರಡು ಸಲಹೆಗಳನ್ನು ಕೊಡುತ್ತಿದ್ದೆ.

MR. SPEAKER —Discussion is concluded and the Hon. Minister will reply.

ಅಧ್ಯಕ್ಷರು.—ಮಂತ್ರಿಗಳು ಈಗ ಉತ್ತರ ಕೊಡಲಿ, ಮಾನ್ಯ ಪ್ರಭಾಕರ್‌ರವರು ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮೊದಲೇ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಪ್ರಭಾಕರ್‌ರವರು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಹೇಳಿದಮೇಲೆ, ಪ್ರಭಾಕರ್‌ರವರು ಮೊದಲೇ ಕ್ಲಾರಿಫಿಕೇಷನ್ ಕೇಳಲಿ.

† ಶ್ರೀ ಬೇಗಾನೆ ರಾಮಯ್ಯ (ಗ್ರಾಮಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ನನ್ನ ಇಲಾಖೆಯ ಬೇಡಿಕೆಯ ಮೇಲೆ, ವಿರೋಧಿ ಪಕ್ಷದ ಸದಸ್ಯರುಗಳೂ ಮತ್ತು ಈ ಕಡೆಯ ಸದಸ್ಯರುಗಳೂ ಕೂಡ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಎರಡೂ ಕಡೆಯಿಂದ ಬಂದಿರತಕ್ಕ ಸಲಹೆಗಳೂ ಕೂಡ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಹೊಸ ಬೆಳಕನ್ನು ಮತ್ತು ಹೊಸ ಯೋಜನೆಯನ್ನು ಕೊಡುವ ದೃಷ್ಟಿಯಿಂದ ಬಂದಿವೆ ಎಂದು ನಾನು ಭಾವಿಸುತ್ತೇನೆ. ಮೊಟ್ಟಮೊದಲನೆಯದಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರಾದಂತ ಮಲ್ಲಪ್ಪನವರು ತಾಲ್ಲೂಕು ಅಭಿವೃದ್ಧಿ ಮಂಡಲಿ

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಗಳಿಗೆ ಪಕ್ಷದ ಸದಸ್ಯರುಗಳನ್ನು ನಿಲ್ಲಿಸುವ ಉದ್ದೇಶವನ್ನು ಕೈಬಿಟ್ಟು, ಪಕ್ಷರಹಿತವಾದಂತ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳಿದರು. ಇವತ್ತಿನ ಪ್ರಜಾಪ್ರಭುತ್ವ ಬೆಳೆದಿರುವಂತಾದ್ದೇ ಪಕ್ಷಗಳ ಮೇಲೆ. ಅವರು ಒಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಪಕ್ಷದ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಿ, ಆರಿಸಿ ಬರತಕ್ಕಂಥ ಅಧ್ಯಕ್ಷರುಗಳು ಮಾಡತಕ್ಕಂಥ ಅನೇಕ ದುರ್ವ್ಯವಹಾರಗಳು ಅನೇಕ ಎಂಬುದನ್ನು ಅವರ ಭಾಷಣದಲ್ಲಿ ನಾನು ಗಮನಿಸಿದೆ. ನಾನು ಈ ಖಾತೆಯನ್ನು ವಹಿಸಿಕೊಂಡು ೪-೫ ತಿಂಗಳಾಯಿತು. ನಾನು ಈ ಖಾತೆಯನ್ನು ವಹಿಸಿಕೊಂಡನಂತರ ಯಾರೇ ಅಧಿಕಾರಿಗಳು ಎಲ್ಲಿ ಏನಾದರೂ ತಪ್ಪು ಮಾಡಿರಲಿ, ಇಂಥ ತಪ್ಪುಗಳನ್ನು ನನ್ನ ಗಮನಕ್ಕೆ ತಂದಂತ ಕಾಲದಲ್ಲಿ ಶೀಘ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತ ವಿಶ್ವಾಸ ನನಗಿದೆಯೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ೨೪

ಗಂಟೆಯಲ್ಲಿ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಿದ್ದೇನೆ. ಮಾನ್ಯ ಶಿವನಂಜಪ್ಪನವರು ಎಷ್ಟು ಪತ್ರಗಳನ್ನು ಬರೆದರೂ ಉತ್ತರವೇ ಬರುತ್ತಿಲ್ಲವೆಂದು ಹೇಳಿದರು. ಇವತ್ತು ಅವರು ಬರೆದಿರುವ ಪತ್ರಗಳಿಗೆ ಪ್ರತ್ಯುತ್ತರವಾಗಿ ಎರಡು ಪತ್ರಗಳನ್ನು ಬರೆದಿದ್ದೇನೆ. ಕೆಲವು ಸಂದರ್ಭದಲ್ಲಿ ಬರೆಯುದೇ ಇರಬಹುದು.

ಶ್ರೀ ಜಿ.ಎಸ್. ಶಿವನಂಜಪ್ಪ.—೪-೬ ಪತ್ರಗಳನ್ನು ಬರೆದಿದ್ದೇನೆ.

ಶ್ರೀ ಬೇಗಾನೆ ರಾಮಯ್ಯ.—ಪರಿಶೀಲನೆ ಮಾಡುತ್ತೇನೆ. ತಾವು ಸಹಕರಿಸಬೇಕು ತಮಗೆ ಗೊತ್ತಿದೆ ಹೊಸದಾಗಿ ಇಷ್ಟು ದೊಡ್ಡ ಖಾತೆಯ ಸೂತ್ರವನ್ನು ಹಿಡಿದುಕೊಂಡು ಆಡಳಿತ ನಡೆಸುವಂತಾ ಕಾಲದಲ್ಲಿಕೆಲವು ಲೋಪದೋಷಗಳು ನಡೆಯಬಹುದು. "ಯಜಮಾನಿಕೆಯು ಬುಡ ಕಷ್ಟ ಅಧಿಕಾರದ ಕೊನೆ ಕಷ್ಟ" ಎನ್ನುವಂತೆ ಯಜಮಾನಿಕೆ ಕೂಡ ಕಷ್ಟ ಇದೆ. ಶ್ರೀಮಾನ್ ಮಲ್ಲಪ್ಪನವರು ಕೆಲವು ಸಲಹೆಗಳನ್ನು ಕೊಡುತ್ತಾ, ಜಿಲ್ಲಾ ಪರಿಷತ್ ಮಾಡಬೇಕಾಗಿತ್ತು ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ ಇತ್ತೀಚಿನ ದಿನಗಳಲ್ಲಿ ಗ್ರಾಮಪಂಚಾಯ್ತಿಗಳಲ್ಲಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಹೆಚ್ಚು ಅಧಿಕಾರವನ್ನು ಕೊಟ್ಟು ಅಧಿಕಾರ ವಿಕೇಂದ್ರೀಕರಣಮಾಡಿರುವುದರಿಂದ, ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಾಗಲೀ, ತಾಲ್ಲೂಕು ಅಭಿವೃದ್ಧಿ ಮಂಡಲಿಯ ವ್ಯಾಪ್ತಿಯಲ್ಲಾಗಲೀ ಎಲ್ಲಾ ಕಾರ್ಯಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುವಂತ ವ್ಯವಸ್ಥೆಯಿರುವುದರಿಂದ ಅಷ್ಟೊಂದು ಶೀಘ್ರವಾಗಿ ಗಮನಹರಿಸಲಿಲ್ಲ. ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. ಕುಡಿಯುವ ನೀರಿನ ಸೌಕರ್ಯದ ಬಗ್ಗೆ ಹೇಳಿದ್ದಾರೆ, ರಾಜ್ಯದಲ್ಲಿ ೨೬,೫೦೦ ಹಳ್ಳಿಗಳಿದ್ದು, ಅದರಲ್ಲಿ ೪೦೨ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟರೆ ಎಲ್ಲಾ ಹಳ್ಳಿಗಳಿಗೂ ಒಂದೊಂದು ಕುಡಿಯುವ ನೀರಿನ ಬಾವಿಯನ್ನು ಕೊಟ್ಟಂತಾಗುತ್ತದೆ. ಕರ್ನಾಟಕದ ೨೫ನೇ ವರ್ಷದ ಬೆಳ್ಳಿ ಹಬ್ಬದ ಆಚರಣೆಗೆ ಮುಂಚಿತವಾಗಿ ಉಳಿದಿರತಕ್ಕ ೪೦೨ ಹಳ್ಳಿಗಳಿಗೂ ಬಾವಿಗಳನ್ನು ಒದಗಿಸುವ ಗುರಿಯನ್ನು ಇಟ್ಟುಕೊಂಡು ತೀವ್ರಗತಿಯಿಂದ ಕೆಲಸ ಮಾಡುತ್ತಿದ್ದೇವೆ. ತಾವುಗಳು ಏನೂ ಆಗಿಲ್ಲ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ನೋಡುವುದಾದರೆ, ಎಲ್ಲೂ ಏನೂ ಆಗಿಲ್ಲವೆಂದು ಕಾಣುತ್ತೆ. ಆಗಿದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವುದಾದರೆ ಅಗಾಧವಾಗಿ ಬೆಳೆದಿರುವುದು ಕಾಣುತ್ತದೆ. ಕಳೆದ ಮೂವತ್ತು ವರ್ಷಗಳಲ್ಲಿ ಗ್ರಾಮೀಣ ಜೀವನದ ಸಮಾಜದಲ್ಲಿ ಸುಧಾರಿಸಿದೆ ಎನ್ನುವುದನ್ನು ಕಾಣಬಹುದು. ನಾನು ಹಳ್ಳಿ ಜೀವನದ ಮಧ್ಯೆ ಬೆಳೆದು ಬಂದಿರುವಂತ ವ್ಯಕ್ತಿ, ಒಂದು ಕಾಲದಲ್ಲಿ ಹಳ್ಳಿಯ ಜೀವನ ಹೇಗಿತ್ತು ಎನ್ನುವುದನ್ನು ನಾನು ಗಮನಿಸಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೇಗಾನೆ ರಾಮಯ್ಯನವರು ನನ್ನ ಕಿರಿಯ ಸ್ನೇಹಿತರು. ಮುಂದೆ ಏನೇನು ಮಾಡುತ್ತೇವೆ, ಈಗ ಏನು ಮಾಡಿದ್ದೇನೆ ಎನ್ನುವುದನ್ನು ಹೇಳಲಿ.

ಶ್ರೀ ಬೇಗಾನೆ ರಾಮಯ್ಯ.—೪-೫ ತಿಂಗಳಲ್ಲಿ ಮಾಡುವಷ್ಟು ಮಾಡಿದ್ದೇನೆ. ಮುಂದೆ ಮಾಡುತ್ತೇನೆ ಎನ್ನುವ ವಿಶ್ವಾಸ ಇದೆ. ಬಂದಿರತಕ್ಕ ಟೀಕೆಗಳಿಗೆ ಪ್ರತ್ಯುತ್ತರ ಕೊಡದಿದ್ದರೆ ಹೇಗೆ ? ೪ ತಿಂಗಳಲ್ಲಿ ಮಾಡಿರುವ ಕೆಲಸ ಮುಖ್ಯವಾಗಿ ಇಲಾಖೆಗೆ ಹೊಸ ತಿರುವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಇಲಾಖೆಗೆ ಕಳೆದ ೩೦-೩೨ ವರ್ಷಗಳಿಂದ ತನ್ನದೇ ಆದಂತ ಒಂದು ನಿರ್ದೇಶನಾಲಯ ಇರಲಿಲ್ಲ. ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ಮಾಡುವಂತ ಯೋಜನೆ ಮಾಡಿದ್ದೇನೆ. ಈ ಇಲಾಖೆಯಲ್ಲಿ ಸ್ವತಂತ್ರವಾಗಿ ಕೆಲಸಕಾರ್ಯಗಳನ್ನು ಮಾಡುವಂತ ಒಂದು ವ್ಯವಸ್ಥೆಯಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರಾದ ಜಯದೇವರಾಜ ಅರಸು ಅವರ ಭಾಷಣದಲ್ಲಿ ಮತ್ತು ಅನೇಕ ಸದಸ್ಯರುಗಳ ಭಾಷಣದಲ್ಲಿರುವಂತ ಒಂದು ಕಳಕಳಿಯನ್ನು ಕಂಡೆನು. ಇದು ಸತ್ಯವಾದ ವಿಷಯ, ಇದರ ಬಗ್ಗೆ ಸಂಪೂರ್ಣವಾಗಿ ಚಿಂತನೆ ಮಾಡುತ್ತಿದ್ದೇನೆ. ಈ ಇಲಾಖೆಗೆ ಹೊಸ ತಿರುವನ್ನು ಯಾವರೀತಿ ಕೊಡಬೇಕು ? ಯಾವ ರೀತಿಯ ಮಾಡಬೇಕೆಂಬುವನ್ನು ಯೋಚನೆ ಮಾಡುತ್ತಿದ್ದೇನೆ.

ಅಧ್ಯಕ್ಷರೆ, ಸುಮಾರು ಒಂಭತ್ತು ಜನ ಸದಸ್ಯರು ನನ್ನ ಖಾತೆಯ ಬಗ್ಗೆ ಮಾತನಾಡಿದ್ದಾರೆ. ಹಿಂದೆ ನನ್ನ ಖಾತೆಯನ್ನು ವಹಿಸಿಕೊಂಡಿದ್ದಂತಹ ಶ್ರೀಮಾನ್ ಪ್ರಭಾಕರ್ ಅವರು ಕೂಡ ಹೊಸ ಹೊಸ ಬೆಳಕನ್ನು ಚೆಲ್ಲಲಿಕ್ಕೆ ವಿಷಯವನ್ನು ಕೊಡುತ್ತಾ ಇರುತ್ತಾರೆ. ಮಾನ್ಯ ಮಲ್ಲಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ಅವರ ಅಭಿಪ್ರಾಯ ಏನು ಎಂದರೆ ಇನ್ನು ಹತ್ತು ವರ್ಷಗಳ ಕಾಲ ದೊಡ್ಡ ದೊಡ್ಡ ಶಹರಗಳ ಕಡೆ ಗಮನಿಸದೆ ಹಳ್ಳಿಗಳ ಕಡೆ ಗಮನಿಸಬೇಕು ಅಂತ ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರಾದ ದೇಶಪಾಂಡೆ, ಲಕ್ಷ್ಮಿಸಾಗರ್ ಅವರು ಒಪ್ಪುವುದಾದರೆ ಹಳ್ಳಿಗಳ ಕಡೆ ಗಮನ ಕೊಡಬಹುದು,

ಸುಮಾರು ನೂರಕ್ಕೆ ಎಂಭತ್ತು ಭಾಗ ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅವರ ಬದುಕಿನ ಚಿತ್ರ ಬಹಳ ಕಷ್ಟದಲ್ಲಿ ಇದೆ. ಹಳ್ಳಿಗಳ ಕಡೆ ಕುಡಿಯುವ ನೀರಿನ ಭಾವಿಗಳು ಬೇಕು, ಮನೆಗಳು ಬೇಕಾಗಿದೆ. ಸರ್ವಜ್ಞ ಒಂದು ಮಾತು ಏನು ಹೇಳಿದ್ದಾನೆ ಅಂದರೆ ಬೆಚ್ಚನೆಯ ಮನೆ ಇದ್ದು, ವೆಚ್ಚಕ್ಕೆ ಹಣವಿದ್ದು, ಇಚ್ಛೆಯನರಿಯುವ ಸತಿಯಿದ್ದರೆ, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಮಂತ್ರಿಗಳು ಮೊದಲು ಮಾತನಾಡುವಾಗ ಏನು ಹೇಳಿದರು ಅಂದರೆ ನಾನು ಹಳ್ಳಿಯಿಂದ ಬಂದಿರತಕ್ಕವನು. ಹಳ್ಳಿಗಳ ಕಡೆ ಎಲ್ಲಾ ಪರಿಶುದ್ಧವಾಗಿದೆ ಅಂತ ಹೇಳಿದರು. ಈಗ ಹಳ್ಳಿಗಳಲ್ಲಿ ಬಾವಿಗಳು ಬೇಕು, ಮನೆಗಳು ಬೇಕು ಅಂತ ಹೇಳುತ್ತಿದ್ದಾರೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರು ನನ್ನ ಭಾಷಣ ಮುಗಿದ ಮೇಲೆ ತಿಳಿಸಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಇವೊತ್ತು ಎಲ್ಲ ಹಳ್ಳಿಗಳು ಚೆನ್ನಾಗಿವೆ, ಸ್ವರ್ಗದಂತಿವೆ ಅಂತ ಹೇಳಲಿಲ್ಲ. ಹಳ್ಳಿಯ ಚಿತ್ರ ಯಾವರೀತಿ ಇದೆ ಅಂತ ಹೇಳಿದ್ದೇನೆ. ಇವೊತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಕುಡಿಯುವ ನೀರಿನ ಸಮಸ್ಯೆ ಇದೆ, ಮನೆಗಳು ಬೇಕಾಗಿವೆ. ಇನ್ನು ಕೆಲಸ ಮಾಡಲಿಕ್ಕೆ ಕಸಬು ಬೇಕಾಗಿದೆ. ಇದು ಬಹಳ ದಿವಸದಿಂದ ಇದೆ. ಇದು ಮಾನ್ಯ ಬಸವಲಿಂಗಪ್ಪನವರಿಗೂ ಗೊತ್ತಿದೆ ಮಾನ್ಯ ಬಸವಲಿಂಗಪ್ಪನವರು ರೆವಿನ್ಯೂ ಖಾತೆಯನ್ನು ವಹಿಸಿಕೊಂಡಿದ್ದಾಗ ಎಲ್ಲರಿಗೂ ಭೂಮಿಯನ್ನು ಕೊಡಲಿಕ್ಕೆ ಆಗಲಿಲ್ಲ. ಹಾಗೆ ನೋಡುವುದಾದರೆ, ಈ ಕೆಲಸದಲ್ಲಿ ಪ್ರತಿಯೊಬ್ಬರಿಗೂ ಮನೆಗಳನ್ನು ಕೊಡಬೇಕು ಅಂತ ಕಾರ್ಯಕ್ರಮ ಹಾಕಿಕೊಂಡು ಬಂದಿದ್ದೇವೆ. ಮನೆಗಳನ್ನು ಕಟ್ಟಿರತಕ್ಕದ್ದರ ಬಗ್ಗೆ ಲೋಪದೋಷಗಳಿವೆ ಅಂತ ಹೇಳಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಅಧ್ಯಕ್ಷರು, ಸದಸ್ಯರು ಇರುತ್ತಾರೆ. ವೈಯುಕ್ತಿಕವಾಗಿ ಅವರೂ ಕೂಡ ಇದರ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುವುದಾದರೆ ಅಚ್ಚುಕಟ್ಟಾದ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವಿದೆ ಅಂತ ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ೧೧೩೭ ಎಕ್ಕರೆ ಜಮೀನನ್ನು, ಒಂದು ಸಾವಿರ ಮನೆ ತಾಣಗಳನ್ನು ಹಂಚಿಸಿದ್ದೇವೆ. ಮನೆ ತಾಣಗಳನ್ನು ಬಯಲು ಸೀಮೆಯಲ್ಲಿ ಹಂಚಲಿಕ್ಕೆ ಕಷ್ಟವಾಗುತ್ತದೆ. ನಾನು ಒಂಭತ್ತು ಜಿಲ್ಲೆಗಳಲ್ಲಿ ಈ ಭಾಗದಲ್ಲಿ ಪ್ರವಾಸ ಮಾಡಿದ ಸನ್ನಿವೇಶದಲ್ಲಿ ನೋಡಿದರೆ ಒಂದು ಎಕರೆ ಭೂಮಿಯನ್ನು ಅಕ್ವಿಸಿಷನ್. ಮಾಡಿಕೊಂಡ ತಕ್ಷಣವೇ ಅವರು ಇಲ್ಲಿ ಹೈಕೋರ್ಟಿಗೆ ಬಂದಿರುತ್ತಾರೆ. ನಿರಂತರವಾಗಿ ಕೆಲಸಮಾಡಲಿಕ್ಕೆ ಆಗುವುದಿಲ್ಲ ಅಂತ ಮಾನ್ಯ ಸದಸ್ಯರಿಗೆ ಹೇಳಬೇಕಾಗಿದೆ. ಇವೊತ್ತು ಆಸಕ್ತಿಯಿಂದ ಕೆಲಸ ಮಾಡಬೇಕು ಅಂತ ನಮ್ಮ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಸ್ಥಳೀಯರಿಂದ ನಿಧಾನವಾಗುತ್ತದೆ. ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಕೆಲವು ಕಡೆ ಕೆಲಸ ಕಾರ್ಯಗಳು ಆಗಿಲ್ಲ ಅಂತ ಹೇಳಿದ್ದಾರೆ. ಮಾನ್ಯ ಸದಸ್ಯರು ಹೆಚ್ಚಾಗಿ ಕುಡಿಯುವ ನೀರಿನ ಬಗ್ಗೆ ಮಾತನಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕೆಲವು ಯೋಜನೆಗಳನ್ನು ಹಾಕಿಕೊಂಡು ಮೂರು ಹಂತದಲ್ಲಿ ಕೊಡುತ್ತಿದ್ದೇವೆ. ರಾಷ್ಟ್ರೀಯ ಕಾರ್ಯಕ್ರಮವನ್ನು ಕುಡಿಯುವ ನೀರಿನ ಯೋಜನೆ ಮುಖಾಂತರ ಒಂದು ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರತಕ್ಕ ಕಡೆ ನಲ್ಲಿಗಳನ್ನು ಹಾಕಿಸಿ ನೀರನ್ನು ಕೊಡುತ್ತಿದ್ದೇವೆ. ಇನ್ನು ಕೊಳವೆ ಬಾವಿಗಳ ಮೂಲಕ ನೀರನ್ನು ಕೊಡುತ್ತಿದ್ದೇವೆ. ಹಾಗೆ ತೆರೆದ ಬಾವಿಗಳ ಮುಖಾಂತರ ನೀರನ್ನು ಕೊಡುತ್ತಿದ್ದೇವೆ. ಈ ರೀತಿ ಮೂರು ಹಂತಗಳಲ್ಲಿ ನೀರನ್ನು ಒದಗಿಸುತ್ತಿದ್ದೇವೆ. ಮಾನ್ಯ ಸದಸ್ಯರು ಬೋರ್‌ವೆಲ್ ಬಾವಿಗಳನ್ನು ನೀವು ತೆಗೆದು ಹೋದ ಕೂಡಲೇ ಅವುಗಳು ಕೆಟ್ಟು ಹೋಗುತ್ತವೆ ಅಂತ ಹೇಳಿದರು ಬಹಳ ವರ್ಷಗಳ ಹಿಂದೆ ಆ ರೀತಿ ಆಗುತ್ತಿತ್ತು. ಈಗ ಆ ರೀತಿ ಏನೂ ಆಗುತ್ತಿಲ್ಲ. ಈ ವಿಚಾರದಲ್ಲಿ ಸಾರ್ವಜನಿಕರೂ ಕೂಡ ನಮ್ಮ ಜೊತೆಯಲ್ಲಿ ಸಹಕರಿಸಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಮಾನ್ಯ ಶ್ರೀನಿವಾಸ್ ಅವರು ಕೂಡ ನೋಡಿರಬಹುದು. ಈ ಬೋರ್‌ವೆಲ್ ಇರತಕ್ಕ ಕಡೆ ನಿಂತು ನೋಡಿದರೆ ನಮಗೆ ಅರ್ಥವಾಗುತ್ತದೆ ಮಕ್ಕಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬೋರ್‌ವೆಲ್‌ಗಳ ಹತ್ತಿರ ಆಟ ಆಡುವಾಗ ಕಲ್ಲುಗಳನ್ನು ತೆಗೆದುಕೊಂಡು ಅದರಲ್ಲಿ ಹಾಕಿ ಹಾಳು ಮಾಡತಕ್ಕದ್ದು ಇವೆ. ಸೂಕ್ಷ್ಮವಾದ ವಿಷಯ ಅಂದರೆ ಇದರಲ್ಲಿ ಒಂದು ವಾಷರ್ ಇದೆ. ಅದಕ್ಕೆ ಸುಮಾರು ಹದಿನಾರು ರೂಪಾಯಿ ಆಗುತ್ತದೆ. ಅದು ಎಮ್ಮೆ ಚರ್ಮದಿಂದ ಮಾಡಿರತಕ್ಕದ್ದು. ಬೋರ್‌ವೆಲ್ ಕೆಟ್ಟುಹೋದಾಗ ಅದನ್ನು ಕಿತ್ತು ಬೇರೆ ವಾಷರ್ ಹಾಕಿ ಅಸೆಂಬಲ್ ಮಾಡಿ ಕೂರಿಸಬೇಕಾದರೆ ಸುಮಾರು ೨೫೦ ರೂಪಾಯಿಯಿಂದ ೩೦೦ ರೂಪಾಯಿಗಳವರೆಗೆ ಖರ್ಚಾಗುತ್ತದೆ ಇವೊತ್ತು ಬೋರ್‌ವೆಲ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಜಿಲ್ಲಾಮಟ್ಟದಲ್ಲಿ ಈ ಬಗ್ಗೆ ಎಲ್ಲಾ ಉಪಕರಣಗಳು

ಇರತಕ್ಕ ಪ್ಲ್ಯಾನ್ ಇಟ್ಟು ವ್ಯವಸ್ಥೆ ಮಾಡಿದ್ದೇವೆ. ಆ ಪ್ರಾಂತ್ಯದಲ್ಲಿ ಎಲ್ಲೇ ಈ ಬೋರ್‌ವೆಲ್‌ಗಳು ಕೆಟ್ಟು ಹೋದರೂ ತಕ್ಷಣ ಅಲ್ಲಿ ಹೋಗಿ ರಿಪೇರಿ ಮಾಡಬೇಕು ಅಂತ ಹೇಳಿದ್ದೇವೆ. ಈ ದಿಸೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಇವೊತ್ತು ನಾಲ್ಕು ಎಕರೆ ಜಮೀನು ಇದ್ದರೆ ಒಂದು ಜೊತೆ ಎತ್ತು ಸಾಕುತ್ತಾರೆ. ಭೂಮಿ ಜಾಸ್ತಿ ಆದರೆ ಸಲಕರಣೆಗಳು ಜಾಸ್ತಿ ಹೇಗೆ ಆಗಬೇಕೋ ಅದೇ ರೀತಿ ಜಿಲ್ಲಾ ವ್ಯಾಪ್ತಿಯಲ್ಲಿ ಈ ಬಾವಿಗಳು ಜಾಸ್ತಿಯಾದಂತೆಲ್ಲಾ ಅಲ್ಲಿ ಜಾಸ್ತಿ ವ್ಯವಸ್ಥೆ ಮಾಡಬೇಕಾಗುತ್ತದೆ. ಸಬ್ ಡಿವಿಜನಲ್ ಲೆವಲ್ ನಲ್ಲಿ ಮೊದಲು ವ್ಯವಸ್ಥೆ ಮಾಡಿ ಕಾಲಕ್ರಮೇಣ ತಾಲ್ಲೂಕು ಮಟ್ಟಕ್ಕೆ ಬರಬೇಕು ಅಂತ ಉದ್ದೇಶ ಇದೆ. ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ರೀತಿ ಗ್ರಾಮಾಂತರ ಪ್ರದೇಶದಿಂದ ಕಂಪ್ಲೇಂಟ್ ಬಂದಾಗ ಅಲ್ಲಿಗೆ ತಕ್ಷಣ ಹೋಗಿ ಅದನ್ನು ಬಗೆಹರಿಸುವ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ಇನ್ನು ಅನೇಕ ಸ್ಥಳಗಳಲ್ಲಿ ಬಾವಿಗಳನ್ನು ತೆಗೆಯುಲಿಕ್ಕೆ ಆಗಿಲ್ಲ ಅಂತ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಕಡೆ ಬಾವಿಗಳನ್ನು ತೆಗೆದಾಗ ನೀರು ಸಿಕ್ಕದೇ ಇರುವ ಪರಿಸ್ಥಿತಿ ಇರುತ್ತದೆ. ಅಂತ ಸಂದರ್ಭಗಳಲ್ಲಿ ಮತ್ತೊಂದು ಕಡೆ ತೆಗೆಯಬೇಕಾಗುತ್ತದೆ. ಇಲ್ಲದೇ ಇದ್ದರೆ, ಜಲದ ಮೂಲ ಸಿಕ್ಕದೆ ಇರುವ ಸಂದರ್ಭಗಳಲ್ಲಿ ತಡವಾಗಿದೆ ಅಂತ ಗಮನಿಸಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶಿವನಂಜಪ್ಪನವರು ಬಹಳ ಕಳಕಳಿಯನ್ನು ವ್ಯಕ್ತ ಪಡಿಸಿದರು. ನನ್ನ ಕ್ಷೇತ್ರದ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಬಾವಿಗಳನ್ನು ಮಾಡಿಕೊಡುವ ಬಗ್ಗೆ ಕೊಟ್ಟಿದ್ದೇನೆ ಅದರಕಡೆ ಗಮನಹರಿಸಲಿಲ್ಲ ಅಂತ ಹೇಳಿದರು. ತಮ್ಮ ಜಿಲ್ಲೆಯಿಂದ ಬಂದಿರತಕ್ಕ ಎಲ್ಲಾ ಪಟ್ಟಿಗಳನ್ನು ಅನುಸರಿಸಿಕೊಂಡು ಮಾಡಿಕೊಟ್ಟಿದ್ದೇನೆ. ನಾನು ಮಲೆನಾಡಿನ ಕಡೆಯಿಂದ ಬಂದಿರ ತಕ್ಕವನು. ನನಗೆ ಬೆಳಿಗ್ಗೆ ಫೋನ್ ಬಂದಿತ್ತು, ಶೃಂಗೇರಿಯಲ್ಲಿ ಹೊರಗಡೆ ಬರಲಿಕ್ಕೆ ಆಗುವುದಿಲ್ಲ ಅಷ್ಟು ಮಳೆ ಬೀಳುತ್ತಿದೆ ಅಂತ ಹೇಳಿದರು. ಅದೇ ಚಿತ್ರದುರ್ಗದಲ್ಲಿ ಮಳೆ ಇಲ್ಲ. ಕುಡಿಯುವ ನೀರಿನ ಪ್ರಶ್ನೆ ವಿಚಾರದಲ್ಲಿ ನಮ್ಮ ಭಾಗದ ರಿಗ್ಸ್‌ಗಳನ್ನೆಲ್ಲಾ ಈ ಕಡೆಗೆ ಕಳುಹಿಸಿದ್ದೇವೆ. ಮಾನ್ಯ ಸದಸ್ಯರ ಕಳಕಳಿ ನಮಗೆ ಅರ್ಥವಾಗಿದೆ, ಅವರು ಕೊಟ್ಟಿರತಕ್ಕ ಲಿಸ್ಟ್ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇನೆ. ಮಾನ್ಯ ಸದಸ್ಯರು ತಾವು ಕೊಟ್ಟ ಲಿಸ್ಟ್ ಗಮನಹರಿಸಿಲ್ಲ ಅಂತ ತಿಳಿದುಕೊಳ್ಳಬಾರದು. ಎಲ್ಲ ಸದಸ್ಯರು ಕೊಟ್ಟಿರತಕ್ಕ ಪಟ್ಟಿಯನ್ನು ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಏನು ಹೇಳಿದರು ಅದರ ಬಗ್ಗೆ ಅತ್ಯಂತ ಶೀಘ್ರಗತಿಯಲ್ಲಿ ಮಾಡಿ ತಿಳಿಸುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಪಟೇಲ್‌ರವರು ಒಪ್ಪಿಕೊಳ್ಳಬಹುದು.

ಶ್ರೀ ಶಿವನಂಜಪ್ಪ.—ಅಧ್ಯಕ್ಷರೆ, ಇವರು ಏನು ಹೇಳುತ್ತಿದ್ದಾರೆ ಅಂದರೆ ರಿಪೋರ್ಟ್‌ನಲ್ಲಿ ಇರುವುದನ್ನು ಬಾಯಿ ಪಾಠ ಮಾಡಿದ್ದಾರೆ.

ಶ್ರೀ ಬೇಗಾನೆ ರಾಮಯ್ಯ.—ಅಧ್ಯಕ್ಷರೆ, ನಾವು ಬಂದು ನಾಲ್ಕು ತಿಂಗಳಲ್ಲಿ ಮಾಡಿರತಕ್ಕ ಕೆಲಸಕ್ಕೆ ಮಾನ್ಯ ಸದಸ್ಯರು ಸಂತೋಷಪಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೆ, ಬೇರೆ ಮಂತ್ರಿಗಳಿಗೆ ಹೋಲಿಸಿದರೆ ಇವರು ಭಾರಿ ಬೇಗ ಕಲಿತ್ತಿದ್ದಾರೆ.

ಶ್ರೀ ಬೇಗಾನೆ ರಾಮಯ್ಯ.—ಅಧ್ಯಕ್ಷರೆ, ನಾನು ಬಯಲು ಪ್ರದೇಶದಿಂದ ಬಂದಿರತಕ್ಕವನು, ಮಲೆನಾಡು ಭಾಗಕ್ಕೂ, ಇಲ್ಲಿಗೂ ವ್ಯತ್ಯಾಸ ಇದೆ. ನಾನು ೯ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪರಿಸ್ಥಿತಿ ಅಧ್ಯಯನ ಮಾಡಿ ಕುಂದುಕೊರತೆಗಳನ್ನು ತಿಳಿದುಕೊಂಡು ಬಂದಿದ್ದೇನೆ. ಅಧಿಕಾರಿಗಳ ಜೊತೆ ಇದನ್ನು ಹೇಗೆ ಬಗೆಹರಿಸಬೇಕು ಅಂತ ಚಿಂತನೆ ಮಾಡಿದ್ದೇನೆ.

೧೧-೦೦ ಎ. ಎಂ.

ನಮ್ಮ ಗ್ರಾಮ ಪಂಚಾಯಿತಿಗಳು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮೇಲೆ ಬರುವಂತಹ ದೃಷ್ಟಿಯಿಂದ ಹೆಚ್ಚು ಕೆಲಸ ಮಾಡುತ್ತಿದ್ದೇವೆ. ಅನೇಕ ಸದಸ್ಯರು ಹೇಳಿದರು. ಈ ನಮ್ಮ ಇಲಾಖೆ ಎಲ್ಲ ಇಲಾಖೆಗಳಿಗಿಂತಲೂ ಬಹಳ ದೊಡ್ಡದು, ಮತ್ತೆ ಈ ಇಲಾಖೆ ಎಲ್ಲ ಇಲಾಖೆಗಳೊಡನೆ ನೇರವಾಗಿ ಸಂಬಂಧ ಇರುತ್ತದೆ ಎಂಬುದಾಗಿ ಹೇಳಿದರು. ಗ್ರಾಮಗಳನ್ನು ಆರನೇ ಯೋಜನೆಯಿಂದ ಈಚೆಗೆ ಹಳ್ಳಿಗಾಡಿನಲ್ಲಿರತಕ್ಕಂತಹ ಜನಗಳು ಆರ್ಥಿಕವಾಗಿ ಹಿಂದುಳಿದಿರತಕ್ಕಂತಹವರು. ಮತ್ತೆ ಹಿಂದುಳಿದರತಕ್ಕಂತಹ ಗ್ರಾಮಗಳನ್ನು ನಮ್ಮ ಸರ್ಕಾರದವರು ೪ ಮತ್ತು ಆರನೇ ಯೋಜನೆಗಳಲ್ಲಿ ಹಂತ ಹಂತವಾಗಿ ಎಸ್.ಎಫ್.ಡಿ.ಎ. ಮುಂತಾದ ಅನೇಕ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ೪ ಸಾವಿರಕ್ಕಿಂತ ಕಡಿಮೆ ಉತ್ಪಾದನೆ ಇರತಕ್ಕಂತಹವರಿಗೆ ಹೆಚ್ಚು ಸೌಲಭ್ಯಗಳನ್ನು ಮಾಡಿಕೊಡಬೇಕೆಂ

ಎನ್ನುವ ಬಗ್ಗೆ ಯೋಜನೆಗಳನ್ನು ಹಾಕಿಕೊಂಡು, ಎಸ್.ಎಫ್.ಡಿ.ಎ. ಡಿ.ಪಿ.ಎ.ಪಿ., ಐ.ಆರ್.ಡಿ.ಎ. ಇನ್ನು ಮುಂತಾದ ಯೋಜನೆಗಳ ರೂಪದಲ್ಲಿ ಕೆಲಸ ಮಾಡುವುದಕ್ಕೆ ಮಾನ್ಯ ಸದಸ್ಯರು ತಮ್ಮ ಕಳಕಳಿ ಯನ್ನು ವ್ಯಕ್ತಪಡಿಸಿದ್ದಾರೆ. ಈ ಯೋಜನೆಯನ್ನು ಜಾರಿಗೆ ತರುವುದಾದರೆ ಎಸ್.ಎಫ್ ಡಿ.ಎ. ಕಾರ್ಯ ಕ್ರಮ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿದಂತಹದ್ದು. ಆ ಒಂದು ಕಾರ್ಯಕ್ರಮದ ರೀತ್ಯ ೮ ಜಿಲ್ಲೆ ಗಳನ್ನು ಮೊದಲು ಸೇರಿಸಿದ್ದರು. ಈಗ ನಮ್ಮ ಒಂದು ಪ್ರಯತ್ನದಿಂದ ೧೯ ಜಿಲ್ಲೆಗಳನ್ನೂ ಈ ಒಂದು ಕಾರ್ಯಕ್ರಮದ ವ್ಯಾಪ್ತಿಗೆ ತಂದುಕೊಂಡು ಕೆಲಸ ಮಾಡುತ್ತಿದ್ದೇವೆ. ಈ ಬಗ್ಗೆ ನಾನು ಶ್ರೀಮಾನ್ ಶಿವನಂಜಪ್ಪನವರನ್ನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಹಿಂದೆ ನಿಮ್ಮ ಸರ್ಕಾರ ಕೇಂದ್ರದಲ್ಲಿತ್ತು. ಆವತ್ತಿನ ದಿವಸ ನಿಮ್ಮ ಸರ್ಕಾರ ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡು ಈ ದೇಶದಲ್ಲಿರುವ ಬಡವರು ಉದ್ಧಾರವಾಗಬೇಕು, ಆರ್ಥಿಕವಾಗಿ ಮೇಲೆ ಬರಬೇಕು ಎಂಬ ಬಗ್ಗೆ ಡಿ.ಐ ಆರ್. ಲೋನ್‌ನ ವ್ಯವಸ್ಥೆ ಮಾಡತಕ್ಕಂತಹ ಕಾಲದಲ್ಲಿ ಬಹಳ ನಿಧಾನವಾಗಿ ಮಾಡಿದರು.

ಶ್ರೀ ಎಚ್. ಗಂಗಾಧರಸ್.—ಜನತಾ ಸರ್ಕಾರದವರು ಎರಡು ವರ್ಷಗಳ ಆಡಳಿತದಲ್ಲಿ ೧೬ ಸಾವಿರ ಯೋಜನೆಗಳನ್ನು ಮಾಡಿದ್ದಾರೆ.

ಶ್ರೀ ಬೇಗಾನೆ ರಾಮಯ್ಯ.—ನಮ್ಮ ಆರ್ಥಿಕ ಮಂತ್ರಿಗಳು ಪ್ರಥಮವಾಗಿ ಪ್ರಯತ್ನ ಮಾಡಿ ೪-೫ ಸಾರ ಬ್ಯಾಂಕುಗಳ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಜನತಾ ಸರ್ಕಾರದವರು ಬ್ಯಾಂಕುಗಳ ಡಿಪಾಸಿಟ್ ೧.೫ ಪರ್ಸೆಂಟ್ ಇದ್ದುದನ್ನು ೨ ಪರ್ಸೆಂಟ್‌ಗೆ ಏರಿಸಿದ್ದಾರೆ. ಇನ್ಯಾರೂ ಆ ರೀತಿ ಮಾಡಿರಲಿಲ್ಲ.

ಶ್ರೀ ಬೇಗಾನೆ ರಾಮಯ್ಯ.—ಬ್ಯಾಂಕುಗಳು ಹಾಗೂ ರಿಸರ್ವ್ ಬ್ಯಾಂಕುಗಳನ್ನು ಈ ತರಹ ಕರೆದು ಮಾತನಾಡತಕ್ಕಂತಹ ಅನುಭವ ನನಗೆ ಇದೆ. ಹೊಸ ಅನುಭವ ಇಲ್ಲ ಎಸ್.ಎಫ್.ಡಿ.ಎ. ಮುಖಾಂತರ ವಾಗಿ ಕೆಲವು ಸವಲತ್ತುಗಳನ್ನು ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಬೇಗಾನೆ ರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡು ತ್ತಿದ್ದಾರೆ. ಅವರು ಮಾತನಾಡುವಾಗ ಕನ್ನಡದ ಜೊತೆಗೆ ಸಾಹಿತ್ಯವನ್ನು ಬೆರೆಸಿಕೊಂಡು ಮಾತನಾಡು ತ್ತಿದ್ದಾರೆ. ದಯಮಾಡಿ ಕ್ಷಮಿಸಬೇಕು, ಕಾರಣ ನಾನು ಪುನಃ ನಿಂತುಕೊಳ್ಳುತ್ತಿದ್ದೇನೆ. ಇದು ಬಡ್ಜೆಟ್ ಡಿಮ್ಯಾಂಡ್. ಏನು ಮಾತನಾಡುತ್ತಿದ್ದೀರಿ ? ಎಸ್ ಎಫ್.ಡಿ.ಎ. ಅಥವಾ ಅದರ ಉದ್ದೇಶ ನಮಗೂ ಗೊತ್ತಿದೆ, ಅದನ್ನೂ ಕೂಡ ಓದಿಬಿಟ್ಟಿದ್ದೇವೆ. ಆದರೆ ನೀವು ಯಾವ ಯಾವ ತಾಲ್ಲೂಕುಗಳಲ್ಲಿ ಹಾಗೂ ಯಾವ ಯಾವ ಜಿಲ್ಲೆಗಳಲ್ಲಿ ಏನೇನು ಮಾಡಿದ್ದೀರಿ, ಎಷ್ಟೆಷ್ಟು ಹಣವನು ಖರ್ಚು ಮಾಡಿದ್ದೀರಿ ಈ ೬ ತಿಂಗಳಲ್ಲಿ, ಯಾವ ಯಾವ ಸ್ಕೀಂಗಳನ್ನು ತಯಾರು ಮಾಡಿದ್ದೀರಿ ? ಯಾವ ಯಾವ ಜಿಲ್ಲೆಗಳು ಎಷ್ಟೆಷ್ಟು ಕೆಲಸ ಮಾಡಿದ್ದೀರಿ ? ಹಿಂದಿನ ವರ್ಷಕ್ಕಿಂತ ನಮ್ಮ ಸಾಧನೆ ಇಷ್ಟು, ಮತ್ತು ಇಷ್ಟು ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ ಎಂಬುದಾಗಿ ಎದೆ ಚಪ್ಪರಿಸಿಕೊಂಡು ಈ ಸದನಕೆ ಹೇಳಬೇಕು. ಸಾಹಿತ್ಯವನ್ನು ಬೆರೆಸಿಕೊಂಡು ಮಾತನಾಡಿದರೆ, ಅದು ಯಾರಿಗೂ ಅರ್ಥವಾಗುವುದಿಲ್ಲ. ಮತ್ತೆ ಅದು ಸರಿಹೋಗುವುದೂ ಇಲ್ಲ.

ಶ್ರೀ ಬೇಗಾನೆ ರಾಮಯ್ಯ.—ನಾನು ಹೇಳುವುದನ್ನು ಪೂರ್ತಿಯಾಗಿ ಕೇಳದೆ ಅನುಮಾನ ಪಟ್ಟರೆ ಹೇಗೆ ? ನಾನು ಮಾತನಾಡುವುದಕ್ಕೆ ನಿಂತ ಮೇಲೆ ಎಲ್ಲ ವಿವರಗಳನ್ನೂ ಕೊಡಬೇಕಾಗುತ್ತದೆ. ಹಿಂದೆ ಮಾನ್ಯ ಬಸವಲಿಂಗಪ್ಪನವರೂ ಕೂಡ ಕಂದಾಯ ಮಂತ್ರಿಗಳಾಗಿದ್ದಾಗ ಅವರು ಯಾವ ರೀತಿ ಮಾತ ನಾಡುತ್ತಿದ್ದಾರೆಂಬುದೂ ನನಗೆ ಗೊತ್ತಿದೆ. ಯಾವುದೇ ಒಂದು ವಿಚಾರವನ್ನು ಹೇಳಬೇಕಾದರೂ ಕೂಡ ಪೀಠಿಕೆಯನ್ನು ಕೊಟ್ಟು ಹೇಳಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಈ ಎಲ್ಲ ವಿಷಯಗಳನ್ನೂ ಹೇಳುತ್ತಿದ್ದೇನೆ. ಏನು ಮಾಡಿದ್ದೇವೆ ಎಂಬುದನ್ನು ಕೊನೆಗೆ ಹೇಳುತ್ತೇನೆ. ಅದಕ್ಕಿಂದ ಮೊದಲು ಸದಸ್ಯರು ಕೊಟ್ಟಿರತಕ್ಕಂತಹ ಸಲಹೆಗಳ ಬಗ್ಗೆ ಮತ್ತು ಮಾಡಿರತಕ್ಕಂತಹ ತೀವ್ರತರವಾದ ಟೀಕೆಗಳು. ಏನಿವೆ ಅವುಗಳಿಗೆಲ್ಲಾ ಉತ್ತರವನ್ನು ಕೊಡಬೇಕಾಗುತ್ತದೆ. ಶ್ರೀಮಾನ್ ಶಿವನಂಜಪ್ಪನವರು, ಎಸ್.ಎಫ್.ಡಿ.ಎ ಕಾರ್ಯಕ್ರಮದಲ್ಲಿ ಕಾಳೇಗೌಡ, ಬೋರೇಗೌಡ ಎಂಬುದಾಗಿ ಹೆಸರನ್ನು ಬರೆದು ಕೊಂಡು ಸುಳ್ಳು ಓಚರ್‌ಗಳನ್ನು ಮಾಡಿಕೊಂಡು ಒಂದು ಸಾವಿರ ಇದಕ್ಕೆ, ಅದಕ್ಕೆ ಒಂದು ಸಾವಿರ ಎಂಬು ದಾಗಿ ಸರ್ಕಾರಕ್ಕೆ ಲೆಕ್ಕ ಕೊಟ್ಟು ತಮ್ಮ ಜೇಬಿನ ಒಳಗಡೆ ಅಧಿಕಾರಿಗಳು ಹಾಕಿಕೊಳ್ಳುತ್ತಾರೆ ಎಂಬುದಾಗಿ ಹೇಳಿದರು. ಇಂತಹ ಪ್ರಕರಣಗಳನ್ನು ಸ್ಥಳೀಯವಾಗಿ ಬಗೆಹರಿಸಬೇಕು. ಈ ಯೋಜನೆಗಳು ಇರ

ತಕ್ಕಂತಹದ್ದು ಬಡವರಿಗೋಸ್ಕರ. ಡಿ.ಪಿ.ಎ.ಪಿ. ಕಾರ್ಯಕ್ರಮಗಳೂ ಕೂಡ ಗ್ರಾಮಗಳಲ್ಲಿರತಕ್ಕಂತಹ ಪ್ರಜೆಗಳು ಕಷ್ಟಕ್ಕೆ ಅಂದರೆ ತೊಂದರೆಗೆ ಈಡಾದಾಗ ಸೌಲಭ್ಯಗಳನ್ನು ಜನಗಳಿಗೆ ಮಾಡಿಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಈ ಯೋಜನೆಗಳನ್ನೆಲ್ಲಾ ಮಾಡಿದ್ದೇವೆ. ಆದರೆ ಬಡವರಿಗಾಗಿ ಕೊಟ್ಟಂತಹ ಈ ಸೌಲಭ್ಯಗಳನ್ನು ಅಂದರೆ ಕೂಲಿಗಾಗಿ ಕಾಳು ಯೋಜನೆಯಲ್ಲಿ ಆ ಕಾಳುಗಳನ್ನು ಬೇರೆಯವರಿಗೆ ಮಾರಾಟ ಮಾಡಿದರೆ ಇದಕ್ಕೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲಿಯವರೆಗೆ ಇದನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ, ಅಲ್ಲಿಯವರೆವಿಗೂ ಈ ಸಮಾಜವನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಕೊಟ್ಟಂತಹ ಸವಲತ್ತುಗಳನ್ನು ಅಲ್ಲಿರತಕ್ಕಂತಹ ಜನಗಳು ಬಹಳ ಬುದ್ಧಿವಂತಿಕೆಯಿಂದ ಉಪಯೋಗ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಮತ್ತೆ ಮಾನ್ಯ ಬಸವಲಿಂಗಪ್ಪನವರು ಹೇಳಿರತಕ್ಕಂತಹ ವಿಚಾರಕ್ಕೆ ನೇರವಾಗಿ ಬರುತ್ತೇನೆ. ನಮ್ಮ ಕಾರ್ಯಕ್ರಮಗಳು :—

"ನಾಲ್ಕನೆಯ ಯೋಜನೆಯಲ್ಲಿ ದುರ್ಬಲ ವರ್ಗದವರ ಸ್ಥಿತಿಗತಿಗಳನ್ನು ಸುಧಾರಿಸಲು ಕೆಲವೊಂದು ವಿಶೇಷ ಆರ್ಥಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು ಮತ್ತು ಇವುಗಳನ್ನು ಮುಂದಿನ ಯೋಜನೆಗಳಲ್ಲಿ ಮುಂದುವರಿಸಿಕೊಂಡು ಹೋಗಲಾಗಿದೆ.

ಮಾರ್ಚಿ ೧೯೭೯ರಲ್ಲಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಇವುಗಳ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.

೧೯೮೦-೮೧ರಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣ ೬,೫೦೩.೨೨ ಲಕ್ಷ ರೂಪಾಯಿಗಳು.

(ಲಕ್ಷ ರೂಪಾಯಿಗಳಲ್ಲಿ)

(೧)	ಸಮಗ್ರ ಗ್ರಾಮೀಣ ಅಭಿವೃದ್ಧಿ	೨,೩೫೮.೧೪
(೨)	ಗ್ರಾಮೀಣ ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆ	೨,೧೦೫.೫೦
(೩)	ಸಮುದಾಯ ಅಭಿವೃದ್ಧಿ	೨,೦೩೯.೫೮
	ಒಟ್ಟು	೬,೫೦೩.೨೨

ರೂ.ಗಳನ್ನು ಕೊಟ್ಟಿದ್ದೇವೆ.

ಸಮಗ್ರ ಗ್ರಾಮೀಣ ಅಭಿವೃದ್ಧಿಯಲ್ಲಿ ಡಿ.ಪಿ.ಎ.ಪಿ.. ಎಸ್.ಎಫ್.ಡಿ.ಎ., ಐ.ಆರ್.ಡಿ., ಈ ಮೊದಲಾದವುಗಳದ್ದು ಒಟ್ಟು ಮೊತ್ತ ೨,೩೫೮.೧೪ ಲಕ್ಷ ರೂ.ಗಳು.

(ಎ) ಕ್ಷಾಮ ಪೀಡಿತ ಪ್ರದೇಶಗಳ ಕಾರ್ಯಕ್ರಮಗಳು :—

ನಾಲ್ಕನೆ ಯೋಜನೆಯಲ್ಲಿ ೪೨ ತಾಲ್ಲೂಕುಗಳಲ್ಲಿ ಜಾರಿಯಲ್ಲಿ ತಂದು ೧೧೧೭.೬೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದೆ. ತಾಲ್ಲೂಕನ್ನು ಘಟಕವೆಂದು ಅಂಗೀಕರಿಸಿದೆ, ರಾಜ್ಯಗಳಲ್ಲಿ ಕರ್ನಾಟಕ ಮೊದಲನೆಯದು. ಐದನೆ ಯೋಜನೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಪ್ರಾಧಾನ್ಯತೆಯನ್ನು ನೀಡಲಾಯಿತು. ಬಿಜಾಪುರ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

ಸದ್ಯಕ್ಕೆ ಯೋಜನೆಯು ೪೬ ತಾಲ್ಲೂಕುಗಳಲ್ಲಿದೆ. ೩೪.೬೦ ಕೋಟಿ ರೂಪಾಯಿಗಳಲ್ಲಿ ೨೭.೩೩ ಕೋಟಿ ರೂಪಾಯಿಗಳು ಐದನೆ ಯೋಜನೆಯಲ್ಲಿ ವೆಚ್ಚವಾಯಿತು. ೧೯೭೯-೮೦ರಲ್ಲಿ ಆದ ವೆಚ್ಚ ೭೮೩.೪೬೩ ಲಕ್ಷ ರೂಪಾಯಿಗಳು.

ಎಲ್ಲ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿ ಆಗಿದೆ.

ಇದಲ್ಲದೆ ಎರಡು ಮಧ್ಯಮ ರೀತಿಯ ನೀರಾವರಿ ಯೋಜನೆಗಳನ್ನು ತೀಥಾ ಮತ್ತು ಸೌದಾಗರದಲ್ಲಿ ತೆಗೆದುಕೊಳ್ಳಲಾಗಿದೆ.

ಗುಡ್ಡದರಂಗವ್ವನ ಹಳ್ಳಿಯ ಜಲಾನಯನವನ್ನು ಮಾದರಿ ಜಲಾನಯನ ಯೋಜನೆಯೆಂದು ಪರಿಗಣಿಸಲಾಗಿದೆ,

ಕೇಂದ್ರ ಸರಕಾರದವರು ಮತ್ತು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯವರು ಈ ಕಾರ್ಯವನ್ನು ಶ್ಲಾಘಿಸಿದ್ದಾರೆ.

ವಿಶ್ವಬ್ಯಾಂಕ್ ಪ್ರತಿನಿಧಿ ಕೋಲಾರ ಜಿಲ್ಲೆಯ ಅರಣ್ಯಾಭಿವೃದ್ಧಿ ಕಾರ್ಯವನ್ನು ಪ್ರಶಂಸಿಸಿದ್ದಾರೆ.

ಹಾಲಿನ ಪುಡಿ ಸ್ಥಾವರವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ರಚಿಸಲು ಡಿ.ಪಿ.ಎ.ಪಿ. ಹಣದಿಂದ ೨.೦೦ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ.

ಸ್ವಿಸ್ ಸರಕಾರದ ನೆರವಿನಿಂದ ಕಾರ್ಯಕ್ರಮವನ್ನು ಗದಗ, ಶಿರಹಟ್ಟಿ, ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳಿಗಾಗಿ ೩೭೫. ಲಕ್ಷ ರೂಪಾಯಿಗಳ ಯೋಜನೆ ಸಿದ್ಧಪಡಿಸಲಾಗಿದೆ.

ಈ ಯೋಜನಾ ವರದಿಯನ್ನು ಸ್ವಿಸ್ ಅಭಿವೃದ್ಧಿ ಸಹಕಾರ ವಿಭಾಗ ಮೆಚ್ಚಿಕೊಂಡಿದೆ.

ಯೋಜನೆಯ ಸಂಪೂರ್ಣ ಮಾಹಿತಿ ಇದೆ ಎಂದು ಹೇಳಿದ್ದಾರೆ,

ಕರ್ನಾಟಕವು ಡಿ.ಪಿ.ಎ.ಪಿ. ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಲ್ಲಿ ದೇಶದಲ್ಲಿ ಎರಡನೇ ಸ್ಥಾನವನ್ನು ಗಳಿಸಿದೆ.

೧೯೮೦-೮೧ರಲ್ಲಿ ಈ ಕಾರ್ಯಕ್ರಮಕ್ಕೆ ಮೀಸಲಾದ ಹಣ ೬೯೦.೦೦ ಲಕ್ಷ ರೂಪಾಯಿಗಳು.

ಕರ್ನಾಟಕವು ತನ್ನ ಸ್ವಂತ ಹಣದಿಂದ ೨೨ ತಾಲ್ಲೂಕುಗಳಿಗೆ ಯೋಜನೆಯನ್ನು ವಿಸ್ತರಿಸಿದೆ. ಪ್ರತಿ ತಾಲ್ಲೂಕಿಗೆ ೧೯೮೦-೮೧ರಲ್ಲಿ ೧೨-೦೦ ಲಕ್ಷ ರೂಪಾಯಿಗಳು ದೊರೆಯುವುದು.

ಸಣ್ಣ ರೈತರ ಅಭಿವೃದ್ಧಿ ಯೋಜನೆ

ಸಣ್ಣ ರೈತರ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ವಲಯದಲ್ಲಿ ೮ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ. ಎರಡು ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ಈ ಕಾರ್ಯ ಕೈಗೊಂಡಿದೆ.

ಸಣ್ಣ ರೈತರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಕೇಂದ್ರ ವಲಯದಲ್ಲಿ ಇಲ್ಲಿಯವರೆಗೆ ೬೯೩.೪೨೮ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

೧೯೮೦-೮೧ರಲ್ಲಿ ನಿಗದಿಪಡಿಸಲಾದ ಮೊತ್ತ ೧೮೦.೦೦ ಲಕ್ಷ ರೂಪಾಯಿಗಳು.

೧೯೭೮-೭೯ರಲ್ಲಿ ಉಳಿದ ೯ ಜಿಲ್ಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಯಿತು. ರಾಜ್ಯ ಸರಕಾರದ ಯೋಜನೆಗಳಿಗೆ ೨೫೭.೫೦ ಲಕ್ಷ ರೂಪಾಯಿಗಳನ್ನು ೧೯೮೦-೮೧ರಲ್ಲಿ ಕೊಡಲಾಗಿದೆ.

ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ:-

೮೫ ತಾಲ್ಲೂಕುಗಳಲ್ಲಿ ೧೯೭೮-೭೯ರಲ್ಲಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಈವರೆಗೆ ಆದ ವೆಚ್ಚ ೩೭೯.೭೪ ಲಕ್ಷ ರೂಪಾಯಿಗಳು.

ಶ್ರೀ ಕೆ ಎಚ್. ಶ್ರೀನಿವಾಸ್.—ಈಗ ಮಾನ್ಯ ಸಚಿವರು ಡಿಮ್ಯಾಂಡ್ ಮೇಲೆ ಉತ್ತರ ಕೊಡುತ್ತಿರುವಾಗ ಈಗ ಯಾವ ಯಾವಸ್ಕೀಮ್‌ಗಳು ಇವೆ ಎಂಬುದನ್ನು ಹೇಳಬೇಕಾಗಿಲ್ಲ. ಅವುಗಳು ನಮಗೂ ಸಹಾ ಗೊತ್ತಿವೆ. ಹಾಗೂ ಅವುಗಳು ಯಾವ ಯಾವಸ್ಥಿತಿಯಲ್ಲಿ ಇವೆ ಎಂಬುದೂ ಸಹಾ ನಮಗೆ ಗೊತ್ತಿದೆ. ಇವತ್ತು ಅವುಗಳ ನಾಯಕತ್ವವನ್ನು ಹೊತ್ತ ನಿಮಗೆ ಏನು ಏನು ಸಮಸ್ಯೆಗಳು ಆ ಕೆಲಸಗಳನ್ನು ಕಾರ್ಯಗತ ಮಾಡುವುದರಲ್ಲಿ ಇವೆ ಮತ್ತು ಅವುಗಳ ಚಿಕಿತ್ಸೆಗೆ ಏನು ಮಾಡಬೇಕೆಂಬುದನ್ನು ತಿಳಿಸಬೇಕಾಗುತ್ತದೆ. ಈಗ ಉದಾಹರಣೆಗೆ ಜನತಾ ಗೃಹ ನಿರ್ಮಾಣ ಎಂದು ಇಟ್ಟುಕೊಳ್ಳೋಣ. ಮೊದಲೇ ಆ ಮನೆಗಳು ಕಟ್ಟಿದ ಮೇಲೆ ಉಳಿದಿಲ್ಲ. ಇವುಗಳನ್ನು ಕಂಟ್ರಾಕ್ಟ್ ಕೊಟ್ಟು ಕಟ್ಟಿಸಿರುವುದರಿಂದ ಅಲ್ಲಿ ಕಟ್ಟಿರುವ ಮನೆಗಳು ಉಳಿದಿಲ್ಲ. ಹೆಂಚುಗಳಿದ್ದರೆ, ಮರ ಇಲ್ಲ ಮರ ಇದ್ದರೆ ಇನ್ನೊಂದು ಇಲ್ಲಿ ಈ ಸ್ಥಿತಿಯಲ್ಲಿ ಈ ಗೃಹಗಳು ಇವೆ. ಇವುಗಳಿಗೆ ಯಾವ ಚಿಕಿತ್ಸೆಯನ್ನು ಮಾಡಬೇಕೆಂದು ಹೇಳುವುದು ಬಿಟ್ಟು ಸುಮ್ಮನೇ ಸ್ಟ್ಯಾಟಿಸ್ಟಿಕ್ಸ್‌ನ್ನು ಓದಿದರೆ ಏನೂ ಆಗುವುದಿಲ್ಲ.

ಶ್ರೀ ಬೇಗಾನೇ ರಾಮಯ್ಯ.- ಮಾನ್ಯ ಬಸವಲಿಂಗಪ್ಪನವರು ೮೯-೮೧ನೇ ಸಾಲಿನ ಅಂಕಿಅಂಶವನ್ನು ಕೇಳಿದರು, ಅದಕ್ಕೇ ಓದಿದೆ ಅಷ್ಟೇ ಇಲ್ಲದಿದ್ದರೆ ನಾನು ಓದುವುದಕ್ಕೆ ಹೋಗುತ್ತಾ ಇರಲಿಲ್ಲ. ಶ್ರೀಮಾನ್ ಶ್ರೀನಿವಾಸ್ ಅವರು ಜನತಾ ಮನೆಗಳ ಬಗ್ಗೆ ಹೇಳಿದ್ದಾರೆ. ಆ ಬಗ್ಗೆಯೂ ನಾವು ಚಿಂತನೆ

ಮಾಡುತ್ತಿದ್ದು. ೧,೫೦೦ ರೂಪಾಯಿಗಳ ವೆಚ್ಚದಲ್ಲಿ ಎಷ್ಟು ಅಚ್ಚುಕಟ್ಟಾಗಿ ಮನೆಗಳನ್ನು ಕಟ್ಟಲು ಆಗುತ್ತದೆ ಅಷ್ಟೋ ಪ್ರಯತ್ನ ನಡೆಯುತ್ತಿದೆ. ಇವುಗಳನ್ನು ಕಾಂಟ್ರಾಕ್ಟರ್ ಕೈಯ್ಯಲ್ಲಿ ಕೊಟ್ಟು ಕಟ್ಟಿಸುವ ವ್ಯವಸ್ಥೆ ಇಲ್ಲ. ನೇರ ಮನೆಯವರೇ ತಳಪಾಯ ಮಾಡಬೇಕೆಂದು ಆ ನಂತರ ಸಲಕರಣೆಗಳನ್ನು ಕೊಟ್ಟು ಕಟ್ಟಿಸಿಕೊಡಲಾಗುತ್ತಿದೆ. ಈ ಕಾರ್ಯಕ್ಕೆ ಸ್ಥಳೀಯರೂ ಸಹಾ ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಮಾನ್ಯ ಸದಸ್ಯರೂ ಕೂಡ ಸ್ಥಳೀಯ ತಾಲ್ಲೂಕು ಬೋರ್ಡ್ ಮೆಂಬರ್ ಆಗಿರುತ್ತಾರೆ. ಆ ಬಗ್ಗೆ ಕೆಲಸಕಾರ್ಯಗಳ ಬಗ್ಗೆ ಅವರೂ ಕೂಡ ತಮ್ಮ ಸಲಹೆಗಳನ್ನು ಕೊಡಬೇಕಾಗುತ್ತದೆ. ಬಹುಶಃ ಮಂತ್ರಿಯಾಗಿ ನಾನು ಏನು ಹೇಳಬೇಕಾಗುತ್ತದೆಂದರೆ . . . .

ಶ್ರೀ ಜೆ. ಎಚ್. ಪಟೇಲ್.—ಈ ಬಗ್ಗೆ ಮಾನ್ಯ ಸಚಿವರು ಆಸಕ್ತಿ ವಹಿಸಬೇಕು ಎಂದು ಹೇಳುತ್ತಿದ್ದಾರೆ. ನಾವು ಒಂದು ಊರಿಗೆ ಹೋಗಿ ಹುಡ್ಕೋ ಯೋಜನೆ ಮುಖಾಂತರ ಕಟ್ಟಿಸಿಕೊಟ್ಟ ಮನೆಗಳು ಎಲ್ಲಿ ಇವೆ ನೋಡಬೇಕೆಂದು ಒಬ್ಬ ಮುದುಕ ನನ್ನು ಕೇಳಿದಾಗ, ಆತ ಅವುಗಳು ಎಲ್ಲಿ ಇವೆಯೋ ಎಂಬುದನ್ನು ಹುಡುಕಬೇಕು ಸ್ವಾಮಿ, ಎಂದ. ಎಂದರೆ ಹುಡ್ಕೋ ಮನೆಗಳು ಎಂದರೆ ಅವು ಎಲ್ಲಿವೆ ಎಂದು ಹುಡುಕ ಬೇಕಾಗುತ್ತದೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಪಾಟೀಲರು ಸ್ವಾರಸ್ಯಕರವಾದ ಘಟನೆಯನ್ನು ಹೇಳುತ್ತಿದ್ದಾರೆ. ಆದರೆ ಅವುಗಳು ಹುಡುಕುವ ಸ್ಥಿತಿಯಲ್ಲಿ ಇರುವದಿಲ್ಲ. ಅವುಗಳು ಭದ್ರವಾಗಿಯೇ ಇರುತ್ತವೆ. ವಾಸ್ತವವಾಗಿ ಹಳ್ಳಿಗಳಲ್ಲಿನ ರೈತರ ಬದುಕಿನಲ್ಲಿ ಇಂತಹ ಸಮಸ್ಯೆಗಳು ಬರುತ್ತವೆಂದು ಹೇಳಬೇಕಾಗುತ್ತದೆ. ಹಿಂದಿನ ಸರ್ಕಾರದಲ್ಲಿ ಸರ್ಕಾರದವರು ಹಳ್ಳಿಗಳ ಬಗ್ಗೆ ಹಾಕಿಕೊಂಡಿರತಕ್ಕ ಯೋಜನೆಗಳನ್ನು ಸರಿಪಡಿಸಬೇಕಾದರೇ ಬಹಳ ಕಷ್ಟವಾಯಿತು. ಫಾರೆಸ್ಟ್ ಕಾರ್ಪೊರೇಷನ್‌ನವರು ಈ ಮನೆಗೆ ತೀರು ರೀಪರ್, ಕಿಟಕಿ, ಬಾಗಿಲುಗಳನ್ನು ಮಾಡಿಕೊಡಬೇಕೆಂದು ಹಿಂದಿನ ಸರ್ಕಾರದವರು ಆದೇಶವನ್ನು ಕೊಡಲಾಗಿ ಅದಕ್ಕೆ ಅವರು ಒಪ್ಪಿಕೊಂಡು ಆ ನಂತರ ಅವರು ಯಾವ ಬಾಗಿಲು, ರೀಪರ್ಸ್‌ನ್ನು ಕೊಡಲಿಲ್ಲ. ಇದರಿಂದ ಗಲಾಟೆಯಾಗಿ ಅವರು ಅವುಗಳನ್ನು ಕೊಡಲಾಗುವುದಿಲ್ಲವೆಂದು ಹೇಳಿದರು. ಆ ನಂತರ ನಾವು ಹತ್ತಿರದಲ್ಲಿ ಎಲ್ಲೆಲ್ಲಿ ಮರ ಸಿಕ್ಕುತ್ತವೆ ಅವುಗಳಿಗೆ ವ್ಯವಸ್ಥೆ ಮಾಡಿ ಹೊಸದಾಗಿ ಕಾರ್ಯಕ್ರಮ ಕೈಗೊಳ್ಳಲಾಯಿತು. ಈರೀತಿ ಕ್ರಮ ಕೈಗೊಳ್ಳಲಾಯಿತು. ಇಲ್ಲದಿದ್ದರೆ ಇಷ್ಟು ಮನೆಗಳು ಆಗುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎ.ಎಂ. ಘಾಡಿ.—ಆರು ಸಾವಿರ ರೀಪರ್ಸ್ ಹಾಗೇ ಬಿದ್ದಿವೆ.

ಶ್ರೀ ಬೇಗಾನೇ ರಾಮಯ್ಯ.—ರೀಪರ್ಸ್ ಬಾಗಿಲುಗಳು ಸಿದ್ಧವಾಗಿಲ್ಲ. ಕಿಟಕಿ ಬಾಗಿಲುಗಳನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದರು. ಅವುಗಳನ್ನು ಕೊಡದಿದ್ದ ಪಕ್ಷದಲ್ಲಿ ಇವುಗಳನ್ನೂ ಕೂಡ ತೆಗೆದುಕೊಂಡು ಹೋಗುವುದಿಲ್ಲವೆಂದೆ ಹಾಗಯೇ ಬಿಟ್ಟರು. ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ತಕ್ಷಣ ಸಮಸ್ಯೆಗಳನ್ನು ಬಗೆಹರಿಸಿದ್ದೇವೆ ಇನ್ನೂ ಬೇಕಾದಷ್ಟು ಕೆಲಸಗಳು ಆಗಬೇಕಾಗಿವೆ. ಎಲ್ಲವೂ ಸುಂದರವಾಗಿ ಸುಸೂತ್ರವಾಗಿ ಆಗಿವೆಯೆಂದು ಹೇಳುವು ದಕ್ಕಾಗುವುದಿಲ್ಲ. ಬೇಕಾದಷ್ಟು ಸಮಸ್ಯೆಗಳು ಇವೆ. ಸ್ಥಳೀಯರು ಸಹಕರಿಸಿದರೆ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಕಷ್ಟವೇನೂ ಆಗುವುದಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕ್ಷೇತ್ರಾಧಿಕಾರಿಗಳು ಗಮನಹರಿಸಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ನಿರ್ದಿಷ್ಟವಾಗಿ ಗಮನಕ್ಕೆ ತಂದರೆ ಆ ವಿಷಯದ ಬಗ್ಗೆ ಗಮನ ಕೊಡಲಾಗುವುದು.

ಶ್ರೀ ವಿ ಎಲ್. ಶಿವಪ್ಪ.—ಮಾನ್ಯ ಬಸವಲಿಂಗಪ್ಪನವರು ಅಧಿಕಾರದಲ್ಲಿ ಇದ್ದಾಗ ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಟ್ಟಿರುತ್ತಾರೆ. ಇಲ್ಲಿ ಅನೇಕ ಜನ ಅರ್ಧ ಎಕರೆ, ಮುಕ್ಕಾಲು ಎಕರೆ ಅಕ್ರಮ ಸಾಗುವಳಿ ಯಾರು ಯಾರು ಮಾಡುತ್ತಿದ್ದಾರೆ ಅವರಿಂದ ವಶಪಡಿಸಿಕೊಳ್ಳಬಾರದೆಂದು ಹೇಳಲಾಗಿದೆ. ಇವರಲ್ಲಿ ಜಮೀನು ಇದೆ ಹಣ ಕೊಡಬಾರದೆಂದು ಹೇಳಿರುವುದರಿಂದ ಇವರಲ್ಲಿ ಹಣ ಇಲ್ಲದೆ ಮನೆಗಳು ಬಿದ್ದು ಹೋಗುವ ಪರಿಸ್ಥಿತಿಗೆ ಬಂದಿವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಸರಿಪಡಿಸದೇ ಹೋದರೆ ಇಲಾಖೆಗೆ ಬಹಳ ಕೆಟ್ಟ ಹೆಸರು ಬರುತ್ತದೆ.

ಶ್ರೀ ಕೆ. ನಾರಾಯಣಪ್ಪ.—ತಾಲ್ಲೂಕು ಬೋರ್ಡ್‌ನಲ್ಲಿ ಹಣ ಪೋಲಾಗಿದೆ ಎಂದು ಆಡಿಟ್ ವರದಿಯಿಂದ ತಿಳಿದು ಬಂದಿದ್ದರೂ ಅಲ್ಲಿನ ಅಧಿಕಾರಿಗಳನ್ನು ಏತಕ್ಕೆ ಅಲ್ಲೇ ಇಟ್ಟು ಕೊಂಡಿದ್ದೀರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರು ನಿರ್ದಿಷ್ಟವಾದ ಒಂದು ಆಪಾದನೆಯನ್ನು ತಂದರೆ ಕಾರ್ಯಕ್ರಮ ಕೈಗೊಳ್ಳಬಹುದು. ನಾವು ಎಂತೆಂಥವರನ್ನೋ ಸರಿ ಮಾಡಿದ್ದೇವೆ ಇಂತಹ ಒಬ್ಬರನ್ನು ನಾವೇನೂ ಇಟ್ಟುಕೊಂಡು ಇರುವುದಿಲ್ಲ ಇನ್ನು ಮಾನ್ಯ ಶಿವಪ್ಪನವರು ಒಂದು ವಿಷಯವನ್ನು ಹೇಳಿದರು. ಅವರು ಜಮೀನಿನ ಪ್ರಶ್ನೆ ಹೇಳಿದ್ದಾರೆ ಶ್ರೀ ಬಸವಲಿಂಗಪ್ಪನವರು ಕೊಟ್ಟ ಭೂಮಿ ಬಗ್ಗೆ ಹೇಳಿದ್ದಾರೆ. ಅಲ್ಲಿ ಏನು ವ್ಯವಹಾರ ನಡೆದಿದೆ ಎಂಬ ಬಗ್ಗೆ ವಿವರಣೆ ತರಿಸಿಕೊಂಡು ನೋಡುತ್ತೇನೆಂದು ಹೇಳುತ್ತೇನೆ. ಇನ್ನು ಅನೇಕ ಸದಸ್ಯರು ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಬಗ್ಗೆ ಎನ್.ಆರ್.ಡಬ್ಲ್ಯೂ. ಎಸ್. ಸ್ಕೀಮ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬೋರ್‌ವೆಲ್‌ಗಳನ್ನು ಹಾಕುವ ಬಗ್ಗೆ ಗ್ರಾಮ ಪಂಚಾಯಿತಿಗಳು ಗಮನವಹಿಸಬೇಕಾಗುತ್ತದೆ. ಇನ್ನು ಶ್ರೀ ಕಾಳಮರಿಗೌಡರು ಅವರ ಕ್ಷೇತ್ರದಲ್ಲಿ ಎನ್.ಆರ್.ಎಸ್.ಡಬ್ಲ್ಯೂ. ಸ್ಕೀಮ್ ನಡಿಯಲ್ಲಿದ್ದ ವಿದ್ಯುತ್‌ನ್ನು ನಿಲ್ಲಿಸಿಬಿಟ್ಟಿದ್ದಾರೆಂದು ತಿಳಿಸಿದರು. ಅಲ್ಲಿ ಸುಮಾರು ೧೯೭೭ರಲ್ಲಿ ವಿದ್ಯುಚ್ಛಕ್ತಿ ಶುಲ್ಕವನ್ನು ಕಟ್ಟದೇ ಇರುವುದರಿಂದ ಇಲಾಖೆಯವರು ವಿದ್ಯುತ್‌ನ್ನು ನಿಲ್ಲಿಸಿರುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರತಕ್ಕ ಶುಲ್ಕವನ್ನು ಕಟ್ಟದೆ ಇದ್ದರೆ ಗ್ರಾಮ ಪಂಚಾಯಿತಿಯವರು ಕಟ್ಟದಿದ್ದರೆ ವಿದ್ಯುತ್ತನ್ನು ನಿಲ್ಲಿಸುತ್ತಾರೆ. ಆ ತರುವಾಯ ಈಗ ಮೂರು ತಿಂಗಳಿಂದ ಮತ್ತೆ ವಿದ್ಯುತ್ ಚಾಲೂ ಇದೆ ಎಂಬುದನ್ನು ಈ ಮೂಲಕ ತಿಳಿಸುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಮ್ಮ ಸರ್ಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರತಕ್ಕಂತಹ ವಿದ್ಯುತ್ ದರ ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡಬಾರದೆಂದು ಆಜ್ಞೆಯನ್ನು ಹೊರಡಿಸಿತ್ತು. ಅದನ್ನು ಸರ್ಕಾರ ಬೇರೆ ರೀತಿಯಿಂದ ಸರಿದೂಗಿಸಬೇಕೆಂದು ಗ್ರಾಮ ಪಂಚಾಯಿತಿಗಳಿಗೆ ತೊಂದರೆಯಾಗಬಾರದೆಂದು ಮಾಡಲಾಗಿತ್ತು. ತಾವು ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಕೆ. ಎಚ್. ಶ್ರೀನಿವಾಸ್.—ದೇಶದಲ್ಲಿ ಎಲೆಕ್ಷನ್‌ಗಳು ಬರುತ್ತದೆ ಹೋಗುತ್ತದೆ. ಗ್ರಾಮ ಪಂಚಾಯಿತಿಗಳಿಗೆ ಎಲೆಕ್ಷನ್ ಮಾಡತಕ್ಕಂಥ ಸಂದರ್ಭದಲ್ಲಿ ಒಂದು ಸಮಗ್ರವಾದ ಪಾಲಸಿಯನ್ನು ಅನುಸರಿಸತಕ್ಕಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸರ್ಕಾರದವರು ಕೆಲವು ತೀರ್ಮಾನಗಳನ್ನು ತೆಗೆದುಕೊಂಡು ಭರವಸೆಗಳನ್ನು ಕೊಟ್ಟು ಆಜ್ಞೆಗಳನ್ನು ಹೊರಡಿಸಿದ ಮೇಲೆ ಆ ಭರವಸೆಗಳನ್ನು ಈಡೇರಿಸಿದರೆ ಅದರ ಕೀರ್ತಿ ತಮಗೆ ಉಳಿಯುತ್ತದೆಂದು ಹೇಳುತ್ತೇನೆ.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಸದಸ್ಯರ ಅಭಿಪ್ರಾಯ ಸೂಕ್ತವಾಗಿರುತ್ತದೆ. ಒಟ್ಟಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ವ್ಯಾಪ್ತಿಯೊಳಗೆ ಕೆಲಸ ಮಾಡತಕ್ಕಂಥ ಸಿಬ್ಬಂದಿವರ್ಗ ಬಹಳ ಕಡಿಮೆ ಇದೆ ಎಂದು ಇದನ್ನು ಜಾಸ್ತಿ ಮಾಡಿದರೆ ಎಸ್‌ಎಫ್‌ಡಿಎ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಆಗುತ್ತದೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಭರ್ತಿ ಮಾಡಬೇಕೆಂದು ಹೇಳತಕ್ಕಂಥ ಉದ್ದೇಶ ಬಹಳ ಉತ್ತಮವಾದ ಉದ್ದೇಶವೇ ಆಗಿರುತ್ತದೆ. ಈವತ್ತಿನ ದಿವಸ ಆರ್ಥಿಕ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿರತಕ್ಕಂಥ ಗ್ರಾಮಾಂತರ ಅಭಿವೃದ್ಧಿ ಮಂಡಳಿಗಳಿಂದ ಬರತಕ್ಕಂಥವರಿಗೆ ನಾನು ಹೇಳುವುದೇನೆಂದರೆ ಈ ಎಸ್.ಎಫ್.ಡಿ.ಎ. ಕಾರ್ಯಕ್ರಮವು ನೇರವಾಗಿ ಅರ್ಥಮಂತ್ರಿಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಈ ಯೋಜನೆಯಲ್ಲಿ ಬರತಕ್ಕಂಥ ಫುಡ್ ಫಾರ್ ವರ್ಕ್ ಈ ಕಾರ್ಯಕ್ರಮವನ್ನು ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳನ್ನು ಗುರುತಿಸಿ ಕಾರ್ಯಗತ ಮಾಡತಕ್ಕಂಥದ್ದರ ಬಗ್ಗೆ ಇದು ಒಂದು ಒಳ್ಳೆಯ ಯೋಜನೆಯಾಗಿರುತ್ತದೆ. ಕೂಲಿ ಮಾಡತಕ್ಕಂಥ ಬಡಜನರಿಗೆ ಇದು ಒಂದು ಸಂಜೀವಿನಿ ಇದ್ದಹಾಗೆ ಇರುತ್ತದೆ. ಇದು ಗ್ರಾಮಪಂಚಾಯತಿಗಳಿಂದ ಹಿಡಿದು ತಾಲ್ಲೋಕ್ ಬೋರ್ಡ್‌ಗಳವರೆಗೂ ಬಾದಿರುತ್ತದೆ. ಇದು ಸರ್ವರೀತಿಯಲ್ಲೂ ಗ್ರಾಮ ಅಭಿವೃದ್ಧಿ ಮಂಡಳಿಗಳಿಗೆ ಒಂದು ಸಂಜೀವಿನಿಯಾಗಿದ್ದು ಪ್ರತಿಯೊಂದು ಕ್ಷೇತ್ರಕ್ಕೂ ೪೦-೪೦ ಲಕ್ಷ ರೂಪಾಯಿಗಳನ್ನು ತೊಡಗಿಸಿದ್ದು, ಇದು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿದೆ. ಇಷ್ಟೆಲ್ಲ ಅನುಕೂಲತೆಗಳನ್ನು ಕೊಟ್ಟಿದ್ದರೂ ಕೆಲವುಕಡೆ ಇನ್ನೂ ಜಾಸ್ತಿ ಮಾಡಬೇಕೆಂದು ಕೇಳುತ್ತಿದ್ದಾರೆ. ಇನ್ನು ಕೆಲವು ಕಡೆ ಅಧಿಕಾರಿಗಳು ಇದರ ಲಾಭ ಪಡೆಯುತ್ತಿದಾರೆ. ಆದ್ದರಿಂದ ಇದನ್ನು ನಿಲ್ಲಿಸಿಬಿಡಿ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ಉನ್ನತ ಧ್ಯೇಯದಿಂದ ಕೂಡಿರುವ ಈ ಯೋಜನೆಯಿಂದ ದಿನನಿತ್ಯ ಕೂಲಿ ಮಾಡಿಕೊಂಡು ಜೀವನ ಮಾಡತಕ್ಕಂಥವರಿಗೆ ಇದು ಒಂದು ಸಂಜೀವಿನಿಯಂತಿದೆ. ಈ ಯೋಜನೆಯನ್ನು ಕಾರ್ಯಗತ ಮಾಡತಕ್ಕಂಥ ಕಾಲದಲ್ಲಿ ಆಗತಕ್ಕಂಥ ಲೋಪದೋಷಗಳನ್ನು ಗುರುತಿಸತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಮ್ಮ ಅಭಿಪ್ರಾಯವಾಗಿದೆ. ನಾವು ಕಾರ್ಯಗತ ಮಾಡತಕ್ಕಂಥದ್ದು ಎಲ್ಲರಿಗೂ ಅಂದರೆ ನೇರವಾಗಿ ಗ್ರಾಮಾಂತರ

ಪ್ರದೇಶಗಳಲ್ಲಿರತಕ್ಕಂಥವರಿಗೆ ಅನುಕೂಲವಾಗಲಿ ಎಂದು ಮಾಡಿರುತ್ತೇವೆ. ಇದು ಪರಿಣಾಮಕಾರಿಯಾಗಿ ಕೆಲಸ ಮಾಡಿರುವುದನ್ನು ಸಹ ಅನೇಕ ಕಡೆಗಳಲ್ಲಿ ನಾವು ನೋಡಿದ್ದೇವೆ. ಕೆಲವು ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಉಪ ನಾಯಕರು ಪತ್ರ ಬರೆದು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಅವರು ಪ್ರಸ್ತಾಪ ಮಾಡಿರುವಂತೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇವೆ. ವರದಿ ತರಿಸಿಕೊಂಡು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡುತ್ತೇವೆ.

ಶ್ರೀ ಬಿ. ಬಸವ ಲಿಂಗಪ್ಪ.—ಈ ಉದ್ಯೋಗ ದೊರಕಿಸಿಕೊಡುವಂಥ ಯೋಜನೆ ಏನು ಇದೆ? ಇದನ್ನು ಕಾರ್ಯಗತ ಮಾಡುವಾಗ ಉದಾತ್ತಧ್ಯೇಯ ಮತ್ತು ಧೋರಣೆಗಳನ್ನು ಇಟ್ಟುಕೊಂಡು ಮಾಡತಕ್ಕಂಥದ್ದಾಗಿರುತ್ತದೆ. ಹಳ್ಳಿಗಾಡುಗಳಲ್ಲಿ ಬೇಸಾಯುವನ್ನು ಮಾಡತಕ್ಕಂಥ ಜನಗಳಿಗೆ ಉದ್ಯೋಗವನ್ನು ಕೊಟ್ಟು ಕೊನೆಯಪಕ್ಷ ಜೀವನ ಮಾಡಿಕೊಳ್ಳುವುದಕ್ಕೆ ಆಧಾರ ಇರಲಿ ಎಂದು ಈ ಯೋಜನೆಯನ್ನು ಹಾಕಿದ್ದೇವೆ. ಇದರಲ್ಲಿ ಈ ಯೋಜನೆಯನ್ನು ತಯಾರು ಮಾಡಿದಂಥ ಶ್ರೀಯುತ ನಂಜುಂಡಪ್ಪ ಎಂಬ ಅಧಿಕಾರಿಗಳು ರೈತರಲ್ಲಿ ಅನುಕಂಪ ಇಟ್ಟುಕೊಂಡಿರತಕ್ಕಂಥವರು ಒಬ್ಬರು ಇದ್ದಾರೆ. ಇವರು ಹಲವಾರು ಯೋಜನೆಗಳನ್ನು ನಮ್ಮ ಮುಂದೆ ಇಟ್ಟಿದ್ದರು. ಇದನ್ನು ಕಾರ್ಯಗತ ಮಾಡಬೇಕಾದರೆ ಒಂದು ವರ್ಷ ಆಯಿತು. ಎರಡು ವರ್ಷಗಳಲ್ಲಿ ೯೦ ತಾಲ್ಲೂಕುಗಳನ್ನು ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಈ ಯೋಜನೆ ಗೊತ್ತಿಲ್ಲದ ಅಧಿಕಾರಿಗಳು ತಪ್ಪು ಮಾಡಿಗಬಹುದು, ಮುಂದೆ ಇದನ್ನು ಪರಿಶೀಲನೆ ಮಾಡಿದ ಮೇಲೆ ಸರಿಯಾದ ನಿದರ್ಶನ ಕೊಡಲಿ ಎಂದು ಹೇಳಿ ೯೦ ತಾಲ್ಲೋಕುಗಳಿಗೆ ವಿಸ್ತರಿಸಲಾಯಿತು. ಇದನ್ನು ಕಾರ್ಯಗತ ಮಾಡಬೇಕಾದರೆ ಎಷ್ಟು ತೊಂದರೆಯಾಯಿತು ಎನ್ನುವುದನ್ನು ವಿವರಣೆ ಮಾಡಲು ಅವಶ್ಯಕತೆ ಇಲ್ಲ. ಯಾರು ತುಂಬ ಬಡತನದಿಂದ ಜೀವನ ಮಾಡುತ್ತಿರುತ್ತಾರೋ ಅವರಿಗೆ ಅನುಕೂಲವಾಗಲಿ ಎಂದು ಈ ವ್ಯವಸ್ಥೆಯನ್ನು ಮಾಡಿದೆವು. ಈ ಅನುಕೂಲವನ್ನು ಕಿತ್ತುಕೊಂಡು ಕೆಲವು ಅಧಿಕಾರಿಗಳು, ಕೆಲವು ಕಂಟ್ರ್ಯಾಕ್ಟರುಗಳು ದುರುಪಯೋಗ ಮಾಡಿಕೊಂಡು ತಿನ್ನಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೊಂದಿಲ್ಲ. ಇದನ್ನು ಯಾವ ಭಾಷೆಯಲ್ಲಿ ಹೇಳಬೇಕೋ ನನಗಂತೂ ಅರ್ಥವಾಗುತ್ತಿಲ್ಲ. ಅಧಿಕಾರಿವರ್ಗ ಕಂಟ್ರಾಕ್ಟ್‌ವರ್ಗ ಇಬ್ಬರೂ ಸೇರಿಕೊಂಡಿರುತ್ತಾರೆ. ಅಧಿಕಾರವರ್ಗದವರಲ್ಲಿ ನಿರ್ದಯು ಉಳ್ಳವರು ಕಂಟ್ರಾಕ್ಟ್ ವರ್ಗದಲ್ಲಿ ಶೋಷಣೆ ಮಾಡತಕ್ಕಂಥವರು ಇರುತ್ತಾರೆ. ಈ ಕಂಟ್ರ್ಯಾಕ್ಟರುಗಳು ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಸರ್ಕಾರಿ ಹಣವನ್ನು, ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಇಂಥ ನಿರರ್ಥಕ ಜನರನ್ನು ಬಹಳವಾಗಿ ಕಂಡಿಸಬೇಕಾಗಿದೆ, ಎಲ್ಲೆಲ್ಲಿ ಏನೇನು ಅವಶ್ಯಕ ಕಾರ್ಯಕ್ರಮಗಳು ಇರಂತ್ತವೆ ಅವನ್ನೇ ಗ್ರಾಮಾಂತರ ಯೋಜನೆಗಳಲ್ಲಿ ಅಳವಡಿಸಿಕೊಂಡು ಹಳ್ಳಿಗಳಲ್ಲಿ ಜನರು ಸುಖವಾಗಿ ಇರಲಿ ಮತ್ತು ಈ ಯೋಜನೆಯು ಸಹಕಾರಿಯಾಗಿ ಇರಲಿ ಎಂದು ನಾವು ಮಾಡಿದರೆ ಕಂಟ್ರ್ಯಾಕ್ಟರ್ಸ್ ಇದರಲ್ಲಿ ಪ್ರವೇಶ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಬಿ.ಡಿ.ಓ.ಗಳಗೆ ಈ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಲು ೨೦-೩೦-೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಎಂದು ಅವರ ಕೈಯಲ್ಲಿ ಕೊಟ್ಟರೆ ಯಾರು ಸತ್ಯವಾಗಿ ಕೆಲಸ ಮಾಡುತ್ತಾರೆ. ಲಂಚ ಹೊಡೆದು ದುರುಪಯೋಗ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

೧೧-೩೦ ಎ.ಎಂ.

ಆದ್ದರಿಂದ ತಾವು ಯೋಚನೆ ಮಾಡಬೇಕು. ಈ ಇಲಾಖೆ ಅಂದರೆ ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ತಮ್ಮ ಹತ್ತಿರ ಇದೆಯೋ ಅಥವಾ ಬೇರೆ ಮಂತ್ರಿಯವರ ಹತ್ತಿರ ಇದೆಯೋ ನನಗೆ ಗೊತ್ತಿಲ್ಲ. ಈ ಖಾತೆ ಯಾರ ಹತ್ತಿರವಾದರೂ ಇರಲಿ, ಈ ಸದನದ ಮೂಲಕ ಮಾನ್ಯ ಆರ್ಥಿಕ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಕೆಳಮಟ್ಟದಲ್ಲಿ ಇರತಕ್ಕ ಸಣ್ಣ ಸಣ್ಣ ಅಧಿಕಾರಿಗಳಿಗೆ ಲಕ್ಷಾಂತರ ರೂಪಾಯಿಗಳ ವಹಿವಾಟನ್ನು ಕೊಡುವುದು ತಪ್ಪು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಿ.ಡಿ.ಓ. ಅವರ ಕೈಗೆ ಸುಮಾರು ೨೦-೩೦ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇಷ್ಟೊಂದು ದುಡ್ಡನ್ನು ನೀವು ಅವರಿಗೆ ಕೊಡುವುದರಿಂದ ಅವರು ಸತ್ಯಸಂಧರಾಗಿ ಕೆಲಸ ಮಾಡುವುದಕ್ಕೆ ಸಾಧ್ಯವೆ ? ತಹಸಿಲ್ದಾರ್‌ರವರಿಗೆ ಜೀಪು ಕೊಟ್ಟಿದ್ದೀರಿ, ಸಾಕಷ್ಟು ಸಿಬ್ಬಂದಿ ವರ್ಗವನ್ನೂ ಕೊಟ್ಟಿದ್ದೀರಿ. ಆದರೆ ಅಪರಿಂದ ಕೆಲಸವನ್ನು ಮಾತ್ರ ಮಾಡಿಸುತ್ತಿಲ್ಲ. ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಅಧಿಕಾರವನ್ನು ಕೊಟ್ಟಿದ್ದೀರಿ

ಅಷ್ಟಷ್ಟು ಪ್ರಮಾಣದಲ್ಲಿ ಅವರ ಕಡೆಯಿಂದ ಕೆಲಸವನ್ನು ತೆಗೆದುಕೊಳ್ಳಬೇಕು. ಉದ್ಯೋಗ ದೃಢೀಕರಣ ಯೋಜನೆ ವಿಚಾರದಲ್ಲಿ ಅಧಿಕಾರಿಗಳು ಹೆಚ್ಚಿನ ಅನುಕಂಪವನ್ನು ಹೊಂದಿರಬೇಕು ; ಮತ್ತು ಅದರಂತೆ ಕೆಲಸವನ್ನು ನಿರ್ವಹಿಸಬೇಕು. ಯಾವ ಅಧಿಕಾರಿ ನಿಮ್ಮ ಆಜ್ಞೆಯನ್ನು ಸರಿಯಾಗಿ ಜಾರಿಗೆ ತರುವುದಿಲ್ಲ, ನಿಮ್ಮ ಆಜ್ಞೆಯನ್ನು ಮೀರಿ ನಡೆಯುತ್ತಾನೆ ಅಂಥವನ ವಿರುದ್ಧ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಕೇವಲ ಎನ್‌ಕ್ವೈರಿ ಮಾಡಿ ಬಿಟ್ಟುಬಿಡುವುದಲ್ಲ. ಇತ್ತೀಚೆಗೆ ಅಧಿಕಾರಿಗಳಲ್ಲಿ ಏನೊಂದು ಕೆಟ್ಟ ಭಾವನೆ ಬೆಳೆದು ಬಂದಿದೆ ಎಂದರೆ, ಯಾರಾದರೂ ಪೂಜಾರಿಯನ್ನೋ ಅಥವಾ ಬಸವಲಿಂಗಪ್ಪನವರಂಥವರನ್ನೋ ಅಥವಾ ಬೇಗಾನೆ ರಾಮಯ್ಯನವರಂಥವರನ್ನೋ ಹಿಡಿದುಕೊಂಡರೆ ನಾವು ಏನು ತಪ್ಪು ಮಾಡಿದ್ದರೂ ಬಚಾವ್ ಆಗುತ್ತೇವೆಂದು ತಿಳಿದುಕೊಂಡಿದ್ದಾರೆ. ಅವರು ನಮ್ಮ ಮನೆಗೂ, ನಿಮ್ಮ ಮನೆಗೂ ಓಡಾಡುತ್ತಿರುತ್ತಾರೆ. ಈಗ ತಮ್ಮ ಯೋಜನೆಯ ಪ್ರಕಾರ ರಾಜ್ಯದ ೪೫ ತಾಲ್ಲೂಕುಗಳಲ್ಲಿ ಕಂಟ್ರಾಕ್ಟರ್‌ಗಳ ಮೂಲಕ ಏನು ಕೆಲಸವನ್ನು ಮಾಡಿಸುತ್ತಿದ್ದೀರಿ, ಇನ್ನು ಮುಂದೆ ಅವರ ಮೂಲಕ ಮಾಡಿಸುವುದು ಬೇಡ. ಈಗ ಕಂಟ್ರಾಕ್ಟರುಗಳು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆಂಬುದನ್ನು ಕಂಡುಹಿಡಿದು ಅವರ ಮೇಲೆ ಉಗ್ರಕ್ರಮವನ್ನು ತೆಗೆದುಕೊಳ್ಳಬೇಕು. ಇದು ಉತ್ತಮ ಯೋಜನೆಯಾಗಿರುವುದರಿಂದ ಇದನ್ನು ಕಾರ್ಯಗತಮಾಡುವಾಗ ಅತ್ಯಂತ ಬುದ್ಧಿವಂತಿಕೆಯಿಂದ ಮಾಡಬೇಕು. ಈ ಸಾರಿ ಇದು ಜೂನ್ ತಿಂಗಳಲ್ಲಿ ಪ್ರಾರಂಭವಾಗಿದೆ. ಆದರೆ ಎಷ್ಟೋ ಕಡೆಗಳಲ್ಲಿ ಕೆಲಸದ ಸ್ಥಳಕ್ಕೆ ಇನ್ನೂ ಕಲ್ಲೇ ಬಂದಿಲ್ಲ. ನೂರು ಮ್ಯಾನ್‌ಡೇಸ್‌ನಲ್ಲಿ ೨೫ ದಿವಸ ಕೆಲಸವೇ ನಡೆದಿಲ್ಲ. ಅಲ್ಲಿ ಅಷ್ಟೋ ಇಷ್ಟೋ ಕೆಲಸ ಮಾಡಿರುವವರಿಗೆ ಕಾಳು ಮತ್ತು ದುಡ್ಡು ಕೊಟ್ಟಿಲ್ಲ. ಈ ಯೋಜನೆಯನ್ನು ಮುಂದಿನ ಮಾರ್ಚಿ ತಿಂಗಳಿಂದಲಾದರೂ ಕ್ರಮವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ. ಈ ಇ.ಎ.ಎಸ್. ಸ್ಕೀಂನ್ನು ಇನ್ನೂ......

ಶ್ರೀ ಬಿ. ಇ. ರಾಮಯ್ಯ.—ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಇ.ಎ.ಎಸ್. ಸ್ಕೀಂ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ನಾನಾದರೂ ಹೇಳುವುದಿಷ್ಟೆ. ಈ ಯೋಜನೆಯ ಕೆಲಸವನ್ನು ಕಂಟ್ರಾಕ್ಟರ್‌ಗಳ ಮೂಲಕ ಮಾಡಿಸಬೇಕೆಂಬ ಇಚ್ಛೆ ನಮ್ಮ ಸರ್ಕಾರಕ್ಕೆ ಇಲ್ಲ. ಆದರೆ ಎಲ್ಲೋ, ಯಾರೋ ಈ ರೀತಿ ಕಂಟ್ರಾಕ್ಟರ್‌ಗಳಿಗೆ ಕೆಲಸವನ್ನು ಕೊಟ್ಟಿರಬಹದು. ಅಂಥಾದ್ದು ನಮ್ಮ ಗಮನಕ್ಕೆ ಬಂದರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ನನ್ನ ಗಮನಕ್ಕೆ ಬಂದಿರುವ ಪ್ರಕರಣಗಳಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇನೆ. ಎಲ್ಲ ವಿಚಾರಗಳನ್ನೂ ಸಚಿವರುಗಳೇ ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ಆಯಾಯ ಪ್ರದೇಶದ ಶಾಸಕರುಗಳು ಈ ಉದ್ಯೋಗ ದೃಢೀಕರಣದ ಯೋಜನೆ ಬಗ್ಗೆ ಗಮನಕೊಟ್ಟರೆ ಸರ್ಕಾರದವರು ಕೆಲಸ ಮಾಡಲು ಅನುಕೂಲವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಕಂಟ್ರಾಕ್ಟರ್ ಮೂಲಕ ಈ ಕೆಲಸವನ್ನು ಮಾಡಿಸುತ್ತಿದ್ದಾರೆ ಎಂಬ ದೂರನ್ನು ಸ್ಥಳೀಯ ಶಾಸಕರು ತಮ್ಮ ಗಮನಕ್ಕೆ ತರಬೇಕು. ಒಂದುವೇಳೆ ಆ ಶಾಸಕರೇ ಇದರಲ್ಲಿ ಷರೀಕಾಗಿದ್ದರೆ ಆಗ ನೀವು ಏನು ಮಾಡುತ್ತೀರಿ ? ಇಲ್ಲಿ ಮೋಸ ನಡೆದಿದೆ ಎಂಬುದನ್ನು ನಿಮಗೆ ಯಾರು ತಿಳಿಸುತ್ತಾರೆ. ನೀವು ಸಚಿವರಾಗಿರುವುದರಿಂದ ನಿಮ್ಮ ನಿಮ್ಮ ಇಲಾಖೆಯ ಅಧಿಕಾರಿಗಳನ್ನು ನಿಮ್ಮ ಹತೋಟಿಯಲ್ಲಿಟ್ಟುಕೊಂಡು ಕೆಲಸ ಮಾಡಿಸಬೇಕು. ನಿಮ್ಮ ಇಲಾಖೆಯ ಎಲ್ಲ ಅಧಿಕಾರಿಗಳೂ ನಿಮ್ಮ ಮಾತನ್ನು ಕೇಳುತ್ತಾರೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಅವರು ನಮ್ಮ ಮಾತನ್ನು ಕೇಳುವಂತಿರಬೇಕಾದರೆ ಮೊದಲು ನಾವು ಸತ್ಯಸಂಧರಾಗಿರುವುದನ್ನು ಕಲಿಯಬೇಕು.

ಶ್ರೀ ಪಂಪಾವತಿ.—ಮಾನ್ಯ ಅಧ್ಯಕ್ಷರೆ, ಕಂಟ್ರಾಕ್ಟರ್‌ಗಳ ಮೂಲಕ......

ಅಧ್ಯಕ್ಷರು.—ಈಗ ಮಾನ್ಯ ಸಚಿವರು ಉತ್ತರ ಕೊಟ್ಟಮೇಲೆ ತಾವು ಏನಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ ಕೇಳಬಹುದು.

ಶ್ರೀ ಬಿ. ಇ. ರಾಮಯ್ಯ.—ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ನಾವು ಯೋಜನೆ ಮಾಡುತ್ತಿದ್ದೇವೆ. ಈ ದಿಸೆಯಲ್ಲಿ ಎಸ್.ಎಫ್.ಡಿ.ಎ ; ಡಿಪಿಎಪಿ ಮುಂತಾದ ೩-೪ ಯೋಜನೆಗಳನ್ನು ಒಟ್ಟಿಗೇ ಸೇರಿಸಿ "ಕಾಡಾರ್" ಎಂಬ ಹೆಸರಿನಿಂದ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಕೆಲವು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಈಗಲೇ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಕೆಲಸ ಇರುವುದರ ಜೊತೆಗೆ ಈ ಕೆಲಸವನ್ನೂ ವಹಿಸುವುದಾದರೆ ಅವರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಎಲ್ಲ ಕಡೆಗಳಲ್ಲೂ ಸ್ಪೆಷಲ್ ಡೆಪ್ಯುಟಿ ಕಮಿಷನರ್‌ರವರು ಇದ್ದರೆ ಆಗ ಡೆಪ್ಯುಟಿ ಕಮಿಷನರ್‌ರವರಿಗೆ ಕೆಲಸ ಕಡಿಮೆ

ಯಾಗುತ್ತದೆ. ತಾಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರು ತಹಸೀಲ್ದಾರರು ಇರುವುದರಿಂದ ಈ ಕೆಲಸ ಸುಗಮವಾಗುತ್ತದೆ. ಈ ವಿಚಾರವನ್ನು ನಾನು ಇನ್ನೊಂದು ಸಂದರ್ಭದಲ್ಲಿ ತಮಗೆ ಹೇಳುತ್ತೇನೆ.

ಇನ್ನು ಎರಡನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವರಾಜ ಅರಸ್‌ರವರು ಮಾತನಾಡುತ್ತಾ ನೀವು ಯಾವರೀತಿ ಈ ಅಧಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತೀರೆಂದು ಕೇಳಿದರು. ಇಲ್ಲಿ ಏನಾಗುತ್ತಿದೆ ಎಂದರೆ ಆ ವ್ಯವಸಾಯದ ಇಲಾಖೆಯ ಅಧಿಕಾರಿಗಳನ್ನು ಕಂದಾಯ ಇಲಾಖೆಗೆ ಹಾಕುತ್ತಾರೆ ಕಂದಾಯ ಇಲಾಖೆಯ ಅಧಿಕಾರಿಯವರನ್ನು ಇನ್ನೊಂದು ಇಲಾಖೆಗೆ ಹಾಕುತ್ತಾರೆ. ಅವರು ೨-೩ ವರ್ಷಗಳ ಕಾಲ ಇದ್ದು ಬೇರೆ ಕಡೆಗೆ ಹೊರಟುಹೋಗುತ್ತಾರೆ. ಇಲ್ಲವೇ ಡಿಪಾರ್ಟ್‌ಮೆಂಟ್‌ನವರು ಅವರನ್ನು ವಾಪಸ್ಸು ಕರೆಸಿಕೊಳ್ಳುತ್ತಾರೆ. ಇದರಿಂದ ನಮ್ಮ ಉದ್ದೇಶ, ಕಾರ್ಯ ಸಫಲವಾಗುವುದಿಲ್ಲ. ಆದ್ದರಿಂದ ನಮ್ಮವರನ್ನೇ ಇಲ್ಲಿ ಇಟ್ಟುಕೊಳ್ಳೋಣ ಎಂದು ಯೋಚನೆ ಮಾಡುತ್ತಿದ್ದೇವೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಸ್ವಯಂ ಸೇವಾ ಸಂಸ್ಥೆಗಳು ಎಂದು ಮಾಡಿ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಯವರನ್ನು ಅಧ್ಯಕ್ಷರನ್ನಾಗಿ ಮತ್ತು ಸಂಬಂಧಪಟ್ಟ ಸಚಿವರನ್ನು ಉಪಾಧ್ಯಕ್ಷರನ್ನಾಗಿ ಮಾಡಬೇಕೆಂದು ಮಾಡಿದ್ದೇವೆ. ಗ್ರಾಮೀಣ ಮಟ್ಟದಲ್ಲಿ ಬಹಳ ಉತ್ತಮವಾದ ಕೆಲಸಗಳನ್ನು ಮಾಡಬೇಕೆಂದು ಮಾಡಿದ್ದೇವೆ. ನಾನು ಹಳ್ಳಿಯಿಂದ ಬಂದಿರತಕ್ಕವನಾಗಿರುವುದರಿಂದ ನನಗೆ ಸಾಕಷ್ಟು ವಿಷಯಗಳು ಗೊತ್ತಿವೆ. ಅದೂ ಅಲ್ಲದೆ ತಾಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಅಧ್ಯಕ್ಷರಾಗಿ ಅನುಭವ ಪಡೆದಿರತಕ್ಕ ಸದಸ್ಯರುಗಳು ಬಹಳ ಮಂದಿ ಇಲ್ಲಿ ಕೂತಿದ್ದಾರೆ. ತಾಲ್ಲೋಕು ಬೋರ್ಡ್ ಅಧ್ಯಕ್ಷರುಗಳು ಏನು ಇದ್ದಾರೆ ಅವರುಗಳು ನನ್ನ ಜೊತೆಗೆ ಇದ್ದು ಅವರುಗಳು ಉತ್ತಮವಾದ ಸಲಹೆಗಳನ್ನು ಕೊಟ್ಟು ಸಹಕರಿಸುವುದಾದರೆ, ನಾನು ಗ್ರಾಮಾಭಿವೃದ್ಧಿಯ ಬಗ್ಗೆ ಏನು ಕೆಲಸಕಾರ್ಯಗಳನ್ನು ಮಾಡುವುದಕ್ಕೂ ತಯಾರಿದ್ದೇನೆ. ಮೊದಲನೆ ಮಾತು ಹೇಳುವುದಾದರೆ ಯಜಮಾನಿಕೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಬಹಳ ಕಷ್ಟವಿದೆ. ನನಗೆ ಹೆಚ್ಚಿಗೆ ಕೆಲಸ ಮಾಡಬೇಕೆಂದು ಆಸಕ್ತಿ ಇದೆ. ಆದರೆ ನಿಮ್ಮಂತಹವರ ಸಲಹೆ ಮತ್ತು ಸಹಕಾರಗಳು ಹೆಚ್ಚು ಬೇಕು. ತಮ್ಮ ಸಹಕಾರ ಇದ್ದರೆ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸದಾ ಸಿದ್ಧನಿದ್ದೇನೆ. ಆದರ ಬಗ್ಗೆ ಯಾವಾಗಲೂ ಚಿಂತನೆ ಮಾಡುತ್ತಿದ್ದೇನೆ. ನಾನೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದವನು, ಗ್ರಾಮಾಂತರಗಳಲ್ಲಿ ಯಾವ ಸಮಸ್ಯೆಗಳು ಇವೆ ಎನ್ನುವುದರ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೇನೆ. ಆದರೆ ನಿಮ್ಮ ಸಹಾಯ ಸಹಕಾರ ಇದ್ದರೆ ತಾವು ಏನು ನನ್ನಿಂದ ಹೆಚ್ಚಿನ ಕೆಲಸಕಾರ್ಯಗಳನ್ನು ಬಯಸುತ್ತಿರೋ ಅದನ್ನು ಮಾಡಲು ಸದಾ ಸಿದ್ಧನಿದ್ದೇನೆಂದು ಹೇಳಿ, ನಾನು ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯನ್ನು ಏನು ಮಂಡಿಸಿದ್ದೇನೆ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೆ, ನಾನು ಮೊಟ್ಟಮೊದಲನೆಯದಾಗಿ ಪಂಚಾಯಿ ಸೆಕ್ರೆಟರಿ ಬಗ್ಗೆ ಒಂದು ಅಭಿಪ್ರಾಯ ಕೊಟ್ಟು ಅವರಿಂದ ಬೇರೆ ರೀತಿಯಲ್ಲಿ ಏನಾದರೂ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲಿ ಏನಾಗಿದೆ ಎಂದರೆ ಪಂಚಾಯತಿ ಅಧ್ಯಕ್ಷರ ಹಿಡಿತದಲ್ಲಿ ಸೆಕ್ರೆಟರಿ ಇದ್ದರೂ ಕೂಡ ಅವರು ಏನು ಮಾಡುತ್ತಾರೆಂದರೆ ತಹಸಿಲ್ದಾರ್ ಆಫೀಸಿಗೆ ಹೋಗುತ್ತೇನೆಂದು ಹೇಳಿ ಎಲ್ಲಿಯೋ ಹೋಗುತ್ತಾರೆ. ಗ್ರಾಮಗಳ ಕೆಲಸಕಾರ್ಯಗಳ ಬಗ್ಗೆ ಅಷ್ಟು ಆಸಕ್ತಿ ವಹಿಸುತ್ತಿಲ್ಲವೆಂದು ಅವರ ಬಗ್ಗೆ ಬಹಳ ದೂರುಗಳನ್ನು ಜನರು ಹೇಳುತ್ತಿದ್ದಾರೆ. ಇವನ್ನು ಯಾವರೀತಿ ಮಾಡಬೇಕೆಂದು ತಾವು ಯೋಚನೆ ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೆ ಈ ಪಂಚಾಯತಿ ಕಾರ್ಯದರ್ಶಿಗಳ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ, ಅದಕ್ಕೋಸ್ಕರ ಇವರನ್ನು ಯಾರ ಹಿಡಿತದಲ್ಲಿ ಇದ್ದರೆ ಇವರಿಂದ ಸರಿಯಾದ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವೆಂದು ಯೋಚನೆ ಮಾಡುತ್ತಿದ್ದೇವೆ. ಜೊತೆಗೆ ಈ ಸ್ಟೈಪಂಡರಿ ಗ್ರಾಜುಯೆಟ್ಸ್ ಇದ್ದಾರೆ ಇವರುಗಳನ್ನು ತಾಲ್ಲೂಕಿನ ವ್ಯಾಪ್ತಿಯಲ್ಲಿ ನೇಮಿಸಬೇಕೆ, ನೇಮಿಸಿದರೆ ಅನುಕೂಲವಾಗುತ್ತದೆಯೋ ಎಂದು ಯೋಚನೆ ಮಾಡುತ್ತಿದ್ದೇವೆ ಅದು ಯಾವರೀತಿ ಮಾಡಿದರೆ ಸಹಾಯವಾಗುತ್ತದೆ ಎಂದು ಯೋಚನೆ ಮಾಡಿ ನೋಡುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್. – ಮಾನ್ಯ ಸಭಾಧ್ಯಕ್ಷಣಿಯವರೆ, ಇದುವರೆಗೆ ಚರ್ಚೆಯ ಮೇಲೆ ಉತ್ತರ ಕೊಟ್ಟಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಸಲಹೆಯ ರೂಪದಲ್ಲಿ ಅಥವಾ ಕ್ಲಾರಿಫಿಕೇಷನ್ ರೂಪದಲ್ಲಿ ಕೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ದಿನಾಂಕ ೨-೭-೧೯೭೮ರಲ್ಲಿ ಗಾಜಿನ ಮನೆಯಲ್ಲಿ ಸಭೆ ಸೇರಿ ಈ ಒಂದು ಗ್ರಾಮಾಭಿವೃದ್ಧಿ ಬಗ್ಗೆ ಉಚಿತವಾಗಿ ಹಣವನ್ನು ಸರ್ಕಾರದಿಂದ ಕೊಟ್ಟು ಕೆಲಸ ಮಾಡಿಸಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡು ಜೊತೆಗೆ ಪಂಚಾಯಿತಿಗೆ ಸಾಕಷ್ಟು ಅಧಿಕಾರವನ್ನು ಕೊಡಬೇಕೆಂದು ಮಾಡಿತ್ತು. ಆದರೆ ಈಗಿನ ಸರ್ಕಾರದವರು ಏನೇನು ಅಧಿಕಾರ ಕೊಟ್ಟಿದ್ದಾರೆ ಎನ್ನುವುದು ಒಂದು. ಅವರಿಗೆ ಹಣ ಕೊಡುವುದು ಕೊಡ ಒಪ್ಪಿಗೆ ಆಗಿತ್ತು, ಅದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ? ಇನ್ನು ಸರ್ಕಾರದಿಂದ ಕೆಲವು ಯೋಜನೆಗಳನ್ನು stage by stage ಮಾಡಿದ್ದೇವೆಂದು ಪೇಜ್ ೧೬ ರಲ್ಲಿ ತಿಳಿಸಿದ್ದಾರೆ. ಇದನ್ನೆಲ್ಲಾ ಸಮಗ್ರವಾಗಿ ಪರಿಶೀಲನೆ ಮಾಡಿ ಒಂದೇಸಾರಿ ಯಾವ ಯಾವ ಇಲಾಖೆಗಳಲ್ಲಿ ಇದನ್ನು ಕೊಡಬೇಕೆಂದು ತೀರ್ಮಾನಿಸಲಾಗಿದೆಯೇ ? ನೆನ್ನೆ ಮಾತನಾಡುವಾಗ ಮಾನ್ಯ ಮಿತ್ರರಾದ ಡಿ. ಜಯದೇವರಾಜ್ ಅರಸ್ ಅವರು ಕೆಲವು ತೀರ್ಮಾನಗಳನ್ನು ತಡೆಹಿಡಿದಿದೆಯೆಂದು ಹೇಳಿದ್ದರು ಅದಕ್ಕೆ ಉತ್ತರದಲ್ಲಿ ಏನು ವ್ಯವಸ್ಥೆ ಮಾಡಿದ್ದೀರೆಂದು ಹೇಳಿಲ್ಲ, ನೀವು ಎಷ್ಟು ಹಣ ಕೊಟ್ಟಿದ್ದೀರಿ ಮತ್ತೆ ಎಷ್ಟು ಹಣವನ್ನು ತಡೆಹಿಡಿದಿದ್ದೀರಿ ಮತ್ತೆ ಕೊಟ್ಟಿರುವುದು ಯಾವ ರೂಪದಲ್ಲಿ ಕೊಟ್ಟಿದ್ದೀರಿ ಇನ್ನು ಮೂರನೆಯದು ?

ಶ್ರೀ ಬಿ. ರಾಮಯ್ಯ. ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀಮಾನ್ ಪ್ರಭಾಕರ್‌ರವರು ಈ ಖಾತೆಯನ್ನು ನಡೆಸುತ್ತಿದ್ದವರು, ನಡೆಸುತ್ತಿದ್ದಾಗ ಗಾಜಿನ ಮನೆಯಲ್ಲಿ ಒಂದು ಸಮ್ಮೇಳನವನ್ನು ಮಾಡಿ ಅಲ್ಲಿ ಕೆಲವು ನಿರ್ಣಯಗಳನ್ನು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ರೋಡುಗಳನ್ನು ಮಾಡುವ ಬಗ್ಗೆ ತಾಲ್ಲೂಕು ಬೋರ್ಡುಗಳಿಂದ ಲೋಕೋಪಯೋಗಿ ಇಲಾಖೆಗೆ ವಹಿಸಬೇಕೆಂದು ಹೇಳಿ ಅಲ್ಲಿಯ ಕೆಲಸಕಾರ್ಯಗಳನ್ನು.........

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷಿಣಿಯವರೆ, ನಾನು ಹೇಳಿದ್ದು ರೋಡಿನ ವಿಷಯವಲ್ಲ, ಪಂಚಾಯತಿಗಳಿಗೆ ಯಾವ ರೀತಿಯಿಂದ ಸಹಾಯ ಮತ್ತು ಅಧಿಕಾರ ಕೊಡಬೇಕು ಮತ್ತು ಹಣದ ಸಹಾಯ ಕೊಡುವುದು ಜೊತೆಗೆ ಸರ್ಕಾರದ ನೇತೃತ್ವದಲ್ಲಿ ಹಣ ಕೊಡುವುದರಲ್ಲಿ ಮ್ಯಾಚಿಂಗ್ ಗ್ರಾಂಟ್ಸ್ ಕೊಟ್ಟು ಅಧಿಕಾರ ಕೊಡಬೇಕೆನ್ನುವ ವಿಷಯದಲ್ಲಿ ಚರ್ಚೆಯಾಗಿ ಅದನ್ನು ಕಾರ್ಯಗತ ಮಾಡಲಿಕ್ಕೆ ಯಾವ ರೂಪದಲ್ಲಿ ಇವನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಇತ್ತು. ಆದರೆ ಈಗ ಅದಕ್ಕೆ ಸರ್ಕಾರದವರು ಯಾವರೀತಿ ಯೋಚನೆಮಾಡಿದ್ದಾರೆಂದು ತಿಳಿಸಿಲ್ಲ. ಅದಕ್ಕೆ ನನ್ನ ಸಲಹೆ ಏನು ಎಂದರೆ ವಿಲೇಜ್ ಲೆವೆಲ್‌ನಲ್ಲಿ ಕೋ ಆರ್ಡಿನೇಷನ್ ಸಿಸ್ಟಮ್ಯಾಟಿಕ್ ಆಗಿ ವಿಲೇಜ್ ಪಂಚಾಯತಿ ಚೇರ್‌ಮನ್, ವಿಲೇಜ್ ಅಕೌಂಟೆಂಟ್, Village A. N.M. ಎಲ್ಲರೂ ಕೂಡಿ ಒಟ್ಟಾಗಿ ಎಲ್ಲರ ಸೇವೆಯನ್ನು ಕ್ರೋಢೀಕರಿಸಿ ಕೆಲಸಮಾಡಬೇಕೆಂದು ಇತ್ತು, Give them powers, directly or indirectly at the village level. Every village should become a republic in its own way. ತಾವು ಏನು ದುಡ್ಡು ಕೊಟ್ಟಿದ್ದೇವೆಂದು ಹೇಳಿದ್ದೀರಿ ಅದು ಹೇಗೆ ಕೊಟ್ಟಿದ್ದೀರಿ ? ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಮಾಡಿ ಅದರ ಮುಖಾಂತರ ಪವರ್ ಕೊಡಬೇಕೆಂದು ಇತ್ತು. ಜೊತೆಗೆ ಇದಕ್ಕೆ ಒಂದ ಬೋರ್ಡು ಮಾಡಿ ಬೋರ್ಡಿನವರು ಕೊಟ್ಟ ತೀರ್ಮಾನದ ಪ್ರಕಾರ ಎಷ್ಟು ಕೆಲಸಮಾಡಬೇಕು ಎಂದ, ಎಲ್ಲಾ ಇತ್ತು. ಆದರೆ ಈಗ ವಿಲೇಜ್ ಪಂಚಾಯತಿ ಉದ್ದೇಶವನ್ನು ಮೊಟಕುಮಾಡಿದ್ದೀರಿ ಇದನ್ನು ನೋಡಬೇಕು. ಜೊತೆಗೆ ಕೋ ಆರ್ಡಿನೇಷನ್ ಬಗ್ಗೆ ಏನು ಪ್ರಯತ್ನ ನಡೆದಿದೆ ಇವು ಸಂಪೂರ್ಣವಾಗಿ ಕೆಲಸಮಾಡುವಂತ ಒಂದು ಬಾಡಿಯನ್ನು ಮಾಡಬೇಕೆಂದು ಹಿಂದಿನ ಸರ್ಕಾರದ ಉದ್ದಿಶ್ಯ ಇತ್ತು. ಆದರೆ ಈ ಸರ್ಕಾರದ ಉದ್ದಿಶ್ಯವೇನು ? ಇದರ ಬಗ್ಗೆ ಏನು ಪ್ರಯತ್ನ ಮಾಡಿದ್ದೀರಿ ? ಎಂದು ಹೇಳಿದರೆ ಸಾಕು ?

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೆ, ಬಹುಶ, ಮಾನ್ಯ ಸದಸ್ಯರು ಪ್ರಸ್ತಾಪಮಾಡಿರತಕ್ಕಂಥ ವಿಷಯ ಏನು ಎಂದರೆ ಮುಡ್ಡಿನ ಪ್ರಶ್ನೆ, ನಾವು ಬಂದ ಕೂಡಲೇ ತಕ್ಷಣ ೫೦ ಲಕ್ಷ ರೂಪಾಯಿ ಮ್ಯಾಚಿಂಗ್ ಗ್ರಾಂಟ್ಸ್ ಕಳುಹಿಸಿಕೊಟ್ಟಿದ್ದೇವೆ. ಹಿಂದೆ ಯಾವುದೇ ಸರ್ಕಾರವಿದ್ದಾಗ ಈ ರೀತಿ ಕೊಟ್ಟಿರಲಿಲ್ಲ. ಈಗಾಗಲೇ ಸುಮಾರು ೪೦ ಲಕ್ಷ ರೂಪಾಯಿಯನ್ನು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟಿದ್ದೇವೆ, ಈ ದೃಷ್ಟಿಯಿಂದ ಆರ್ಥಿಕವಾಗಿ ತಾಲ್ಲೂಕು ಬೋರ್ಡು ಮತ್ತು ವಿಲೇಜ್ ಪಂಚಾಯತಿಗಳು ಏನು ಹಣ

ವನ್ನು ಸಂಗ್ರಹಿಸುತ್ತಿದ್ದಾರೆ ಅದಕ್ಕೆ ಸರಿಯಾಗಿ ನಾವು ಕೂಡಾ ಮ್ಯಾಚಿಂಗ್ ಗ್ರ್ಯಾಂಟ್ಸ್ ಕೊಡುತ್ತಿದ್ದೇವೆ. ಇನ್ನು ಸಮಗ್ರವಾಗಿ ಕೆಲಸಕಾರ್ಯಗಳು ನಡೆಯಬೇಕಾದರೆ ನಮ್ಮ ಇಲಾಖೆಯಲ್ಲಿ ಕೋ ಆರ್ಡಿನೇಷನ್ ಇರಬೇಕು ಎಂದು ಹೇಳಿದ್ದೀರಿ. ಆದರ ಬಗ್ಗೆ ಎಲ್ಲಾ ವರದಿಗಳನ್ನು ತರಿಸಿ ನೋಡಿ ಅದರ ಬಗ್ಗೆ ಚಿಂತನೆ ಯನ್ನು ಮಾಡುತ್ತಿದ್ದೇನೆ.

ಇನ್ನು ಮಾನ್ಯ ಸದಸ್ಯರು ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ವಹಿಸುವ ಪ್ರಯತ್ನವನ್ನೂ ಏತಕ್ಕೆ ಮಾಡಬಾರದು ಎಂದು ಹೇಳಿದ್ದಾರೆ ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡುವ ದೃಷ್ಟಿಯಿಂದ ಈಗ ಸದ್ಯಕ್ಕೆ ಅದನ್ನು ನಿಲ್ಲಿಸಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ರಸ್ತೆಗಳನ್ನು ವಹಿಸಿಕೊಳ್ಳಬೇಕು ಎನ್ನುವುದಲ್ಲ. ಯಾವ ಯಾವ ರಸ್ತೆಗಳನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ತಾಲ್ಲೂಕು ಮಂಡಲಿಯ ವ್ಯಾಪ್ತಿಯಲ್ಲಿ ನಿರ್ವಹಿಸುವುದಕ್ಕೆ ಸರ್ಕಾರದವರು ಕೊಡುತ್ತಾರೆಯೋ ಅದನ್ನು ನಿರ್ವಹಿಸುವುದಕ್ಕೆ ಆಯಾ ಸಂಸ್ಥೆಗಳಿಗೆ ಆರ್ಥಿಕ ನೆರವನ್ನೂ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಅವುಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ರಾಮಯ್ಯ.—ಅದು ಪರಿಶೀಲನೆಯಲ್ಲಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ ನಾನು ಒಂದು ಪ್ರಾಮುಖ್ಯವಾದ ವಿಷಯವನ್ನು ತಿಳಿಸಿದ್ದೆ. ಅದಕ್ಕೆ ಉತ್ತರ ಹೇಳಲಿಲ್ಲ. ಸಾಕ್ಷರತೆಯ ಬಗ್ಗೆ ಯಾವರೀತಿಯ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೀರಿ, ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ವಯಸ್ಕರ ವಿದ್ಯಾ ಸೌಲಭ್ಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಈ ಕಾರ್ಯಕ್ರಮ ವನ್ನು ಈಗಾಗಲೇ ತೀವ್ರಗತಿಯಿಂದ ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದರಲ್ಲಿ ನಮ್ಮ ಚಿಂತನೆ ಇದೆ.

ಶ್ರೀ ಕೆ. ರಾಮಭಟ್.—ನಮ್ಮ ರಾಜ್ಯದಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟ್, ರೂರಲ್ ಡೆವಲಪ್ ಮೆಂಟ್‌ಗಾಗಿ ಎಷ್ಟು ಹಣವನ್ನು ತೊಡಗಿಸಿದ್ದೀರಿ, ಇದನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಲು ಏನು ಪ್ರಯತ್ನ ಮಾಡಿದ್ದೀರಿ, ಮತ್ತು ಇದರ ಬಗ್ಗೆ ಎಷ್ಟು ಸಫಲರಾಗಿದ್ದೀರಿ ಎನ್ನುವ ಅಂಕಿ ಅಂಶಗಳು ತಮ್ಮ ಹತ್ತಿರ ಇವೆಯೋ ? ಇದರಿಂದ ಎಷ್ಟು ಜನಗಳ ನಿರುದ್ಯೋಗ ನಿವಾರಣೆಯಾಗಿದೆ ? ಎಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೀರಿ, ಎಷ್ಟು ಜನಗಳಿಗೆ ಇದರಲ್ಲಿ ಉದ್ಯೋಗ ದೊರೆತಿದೆ ಎನ್ನುವ ಅಂಕಿ ಅಂಶಗಳನ್ನೇನಾದರೂ ಸಂಗ್ರಹ ಮಾಡಿದ್ದೀರಾ ? ಮತ್ತು ಎಕನಾಮಿಕ್ ಅಂಡ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ ಎನ್ನುವ ಪುಸ್ತಕದಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅವು ಬಹಳ ಉಪಯುಕ್ತವಾಗಿವೆ. ಅವುಗಳನ್ನು ನಿಮ್ಮ ಇಲಾಖೆಯವರು ಸ್ವೀಕಾರ ಮಾಡುತ್ತಾರೆಯೋ ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುವುದಿಲ್ಲ ಒಂದು ತಿಂಗಳಲ್ಲಿ ಎಲ್ಲಾ ಹಣವು ಪೋಲಾಗುತ್ತಿದೆ. ಅದರ ಮೇಲೆ ಯಾವುದೇ ಕಂಟ್ರೋಲ್ ಇಲ್ಲ. ಅಲ್ಲಿ ಎಲ್ಲಾ ಪಾರ್ಟಿ ಪಕ್ಷ ಗಳ ಸದಸ್ಯರೇ ಇರುತ್ತಾರೆ. ಇದನ್ನು ಕಂಟ್ರೋಲ್ ಮಾಡುವುದು ಕಷ್ಟ ; ಹೀಗಿರುವಾಗ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆಯೋ ? ಹೇಗೆ ಇದನ್ನು ಕಂಟ್ರೋಲ್ ಮಾಡುತ್ತೀರಾ ?

ಶ್ರೀ ಬಿ. ರಾಮಯ್ಯ.—ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿರತಕ್ಕ ಸದಸ್ಯರು ಶಾಸಕರೂ ಇರು ತ್ತಾರೆ. ಆದ್ದರಿಂದ ಅಂಥಾ ಒಂದು ಸನ್ನಿವೇಶವನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಬರುವುದಿಲ್ಲ. ತಾಲ್ಲೂಕು ಬೋರ್ಡಿಗೆ ಕೊಟ್ಟಿರತಕ್ಕ ಹಣವನ್ನು ಅವರು ಮಾರ್ಚಿ ೩೧ನೇ ತಾರೀಖಿನ ಒಳಗೇ ಅವಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆ ದೃಷ್ಟಿ ಯಿಂದ ಅವರು ಆ ಕೆಲಸಗಳನ್ನು ಮಾಡಿ ಹಣವನ್ನು ಖರ್ಚು ಮಾಡುತ್ತಾರೆ. ಮಾನ್ಯ ಸದಸ್ಯರು ಹೇಳಿ ದಂತಹ ಸನ್ನಿವೇಶವೇನಾದರೂ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ರಮೇಶ್‌ಕುಮಾರ್,—ಕೋಲಾರ ಜಿಲ್ಲೆಯಲ್ಲಿ ಹರೇ ನಾಯಕನಹಳ್ಳಿ ಹೋಬಳಿಯಲ್ಲಿ ಮತ್ತು ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್ ಬಹಳ ಲೋಪದೋಷಗಳಿಂದ ನಡೆಯುತ್ತಿದೆ, ಅಲ್ಲಿ ಹಗಲುದರೋಡೆ ನಡೆಯುತ್ತಿದೆ ಎಂದು ಅರ್ಜಿಕೊಟ್ಟು ಹೇಳಿದರೂ ಕೂಡ ಸರ್ಕಾರದವರು ಆ ಕಡೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿಲ್ಲ. ಒಬ್ಬ ಅಧಿಕಾರಿ ಅಲ್ಲಿಗೆ ಬಂದ ನಂತರ ಒಂದು ಹೋಬಳಿಗೆ ೪೦೦ ಕ್ವಿಂಟಾಲ್ ಕಾಳನ್ನು ಕೊಟ್ಟಿದ್ದಾರೆ. ಯಾವ

ಅಧಿಕಾರಿಯನ್ನು ಸಸ್ಪೆನ್ಷನ್‌ನಲ್ಲಿ ಇಟ್ಟಿದ್ದಾರೆಯೋ ಅಂಥವರನ್ನು ಆ ಕ್ಷೇತ್ರದ ಸಚಿವರು ತಮ್ಮ ಸ್ವಂತ ಕ್ಷೇತ್ರಕ್ಕೆ ವರ್ಗ ಮಾಡಿಸಿಕೊಂಡಿದ್ದಾರೆ. ಅವರು ಸಾಕಷ್ಟು ಪ್ರಭಾವಶಾಲಿಗಳಾಗಿದ್ದಾರೆ. ಆ ಅಧಿಕಾರಿಗಳು ಇದನ್ನೆಲ್ಲಾ ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ; ಇದನ್ನು ಮಾನ್ಯ ಮಂತ್ರಿಗಳು ಧೈರ್ಯವಾಗಿ ಎದುರಿಸಿ ಅಲ್ಲಿ ಹಗಲುದರೋಡೆ ಏನಾಗಿದೆ ಅದನ್ನು ತಪ್ಪಿಸಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ತಯಾರಾಗಿದ್ದಾರೆಯೇ ಅಥವಾ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿದ್ದಾರೆಯೇ ?

ಶ್ರೀ ಜೆ. ಎಚ್. ಪಾಟೀಲ್.—ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮ ಮಾಡಬೇಕೆಂದು ನಾನು ಹಿಂದೆ ಸರ್ಕಾರಕ್ಕೆ ಸಲಹೆ ಮಾಡಿದ್ದೆ. ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಅರಣ್ಯ ಸೇರುತ್ತದೆ. ಆದ್ದರಿಂದ ಅರಣ್ಯದಲ್ಲಿ ಬರತಕ್ಕ ಉತ್ಪತ್ತಿಯಲ್ಲಿ ಕೆಲವು ಭಾಗವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟರೆ ಅವುಗಳು ಸಕ್ರಿಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಪರಿಗಣಿಸುತ್ತೀರಾ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಭಟ್ ಅವರು ಕೆಲವು ವಿವರಗಳನ್ನು ಕೇಳಿದ್ದಾರೆ. ಈಗಾಗಲೇ ನಾವು ಸಾಕಷ್ಟು ವಿವರಗಳನ್ನು ವಾರ್ಷಿಕ ವರದಿಯಲ್ಲಿ ಕೊಟ್ಟಿದ್ದೇವೆ. ಅವರಿಗೆ ಇನ್ನೂ ಹೆಚ್ಚಿಗೆ ವಿವರಗಳು ಬೇಕು ಎಂದು ಕೇಳಿದರೆ ಅದನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ ಎನ್ನುವ ಪುಸ್ತಕದಲ್ಲಿ ಉತ್ತಮವಾದ ಸಲಹೆಗಳು ಇವೆ. ಅವುಗಳನ್ನು ಯಾವರೀತಿ ಕಾರ್ಯ ರೂಪಕ್ಕೆ ತರಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಶ್ರೀಮಾನ್ ಪಾಟೀಲ್ ಅವರ ಪ್ರಶ್ನೆ ಏನಿದೆ ಅದರ ಬಗ್ಗೆ ನಾವು ಚಿಂತನೆ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ತಿಮ್ಮಪ್ಪ ಹೆಗ್ಗಡೆಯವರು ಒಂದು ಪ್ರಶ್ನೆಯನ್ನು ಹಾಕಿದರು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ. ಈ ವಿಚಾರ ನಾರ್ತ್ ಕೆನರಾ ಜಿಲ್ಲೆಗೆ ಮಾತ್ರ ಸೀಮಿತವಾಗಿ ಉಳಿದಿದೆ. ಅಲ್ಲಿ ಅರಣ್ಯ ಉತ್ಪನ್ನವನ್ನು ತಾಲ್ಲೂಕು ಬೋರ್ಡುಗಳಿಗೆ ಹಂಚತಕ್ಕ ವ್ಯವಸ್ಥೆ ಇದೆ. ಅದು ಬೇರೆ ಕಡೆಗಳಲ್ಲಿ ಇಲ್ಲ ಎಂದು ತಿಳಿದು ಬಂದಿದೆ. ಇದನ್ನು ಸಮಗ್ರವಾಗಿ ಅರಣ್ಯಪ್ರದೇಶವನ್ನು ಒಳಗೊಂಡಿರತಕ್ಕ ಆಯಾ ತಾಲ್ಲೂಕಿನಲ್ಲಿ ಅರಣ್ಯದಿಂದ ಉತ್ಪನ್ನದಲ್ಲಿ ಇಷ್ಟು ಭಾಗವನ್ನು ಆಯಾ ತಾಲ್ಲೂಕು ಬೋರ್ಡುಗಳಿಗೆ ಕೊಡತಕ್ಕ ವಿಷಯವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ವಿಚಾರ ಮಾಡಿ ತಾಲ್ಲೂಕು ಮಂಡಲಿಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಕೆ. ನಾರಾಯಣಪ್ಪ.—ತಾಲ್ಲೂಕು ಬೋರ್ಡುಗಳಲ್ಲಿ ವರ್ಷದ ಕೊನೆಯಲ್ಲಿ ಎಲ್ಲಾ ಬಿಲ್ಲುಗಳನ್ನೂ ಮಾಡುತ್ತಾರೆ, ಕಂಟ್ರಾಕ್ಟರುಗಳನ್ನು ಸೃಷ್ಟಿ ಮಾಡುತ್ತಾರೆ. ಆಗಲೇ ಎಸ್ಟಿಮೇಟ್ ತಯಾರಾಗುತ್ತವೆ ಬಿಲ್ಲುಗಳೂ ಆಗುತ್ತವೆ. ಒಂದು ವರ್ಷದ ಹಣ ಏನು ಬಾಕಿ ಉಳಿದಿರುತ್ತದೆ ಎಲ್ಲಾ ಬಿಲ್ಲುಗಳನ್ನೂ ಪಾಸು ಮಾಡುತ್ತಾರೆ. ಆದರೆ ಅದನ್ನು

೧೨. ಮಧ್ಯಾಹ್ನ

ಶ್ರೀ ಬಿ. ರಾಮಯ್ಯ.—ಮಾನ್ಯ ರಮೇಶ್‌ಕುಮಾರ್‌ರವರು ನನ್ನ ಒಳ್ಳೆಯ ಸ್ನೇಹಿತರು, ಅವರು ಕೊನೆಯಲ್ಲಿ ನನ್ನ ಬಗ್ಗೆ ಒಳ್ಳೆಯ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಕೊನೆಯಲ್ಲಿ ನನ್ನನ್ನು ರಾಜೀನಾಮೆ ಕೊಡಲಿಕ್ಕೆ ತಯಾರಾಗಿದ್ದಾರೆಯೇ ಅಂತ ಕೇಳಿದ್ದಾರಲ್ಲಾ...

ಶ್ರೀ ರಮೇಶ್‌ಕುಮಾರ್ —ತಾವು ರಾಜೀನಾಮೆ ಕೊಡುವುದು ಬೇಡಿ. ತಾವು ಒಳ್ಳೆಯ ಕೆಲಸ ಮಾಡಿ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಟ್ಟರೆ ಸಾಕು, ಹಾಗಾದರೆ ನಿಮ್ಮನ್ನು ನಾವು ಬೇಗಾನೆ ರಾಮಯ್ಯ ಅಂತ ಕರೆಯುತ್ತೇವೆ. ಇಲ್ಲದೇ ಹೋದರೆ ನಿಮ್ಮನ್ನು ಬೈಗಳ್ ರಾಮಯ್ಯ, ಬದನೆಕಾಯಿ ರಾಮಯ್ಯ ಅಂತ ಕರೆಯಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಂತ್ರಿಗಳು ಇರುವುದು ರಾಜೀನಾಮೆ ಕೊಡುವುದಕ್ಕಲ್ಲ, ಜನಗಳ ಬಗ್ಗೆ ಚಿಂತನೆ ಚರ್ಚೆ ಮಾಡಿ ಅದನ್ನು ಪರಿಶೀಲಿಸುತ್ತೇವೆ ಅಂತ ಹೇಳುವುದು ಅಷ್ಟೇ ಕೆಲಸ ಅವರದ್ದು.

ಶ್ರೀ ಪಿ.ಎನ್. ರೆಡ್ಡಿ.—ಈಗ ನಮ್ಮ ರಾಜ್ಯದಲ್ಲಿ ೧೭೫ ತಾಲ್ಲೂಕು ಬೋರ್ಡ್‌ಗಳು ಇವೆ, ಎಲ್ಲಾ ತಾಲ್ಲೂಕು ಬೋರ್ಡುಗಳಿಗೂ ಬಿ.ಡಿ.ಓ.ಗಳನ್ನು ನೇರವಾಗಿ ಅಪಾಯಿಂಟ್ ಮಾಡಿಲ್ಲಾ. ಕೇವಲ ೬೦ ಜನರನ್ನು ಮಾತ್ರ ಮಾಡಿದ್ದೀರಿ. ಇನ್ನು ಕೆಲವು ತಾಲ್ಲೂಕು ಬೋರ್ಡುಗಳಿಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್, ತಾಸೀಲ್ದಾರ್, ಅಗ್ರಿಕಲ್ಚರಲ್ ಆಫೀಸರ್ಸ್ ಇವರನ್ನು ಓ ಓ.ಡಿ.ಯನ್ನಾಗಿ ತೆಗೆದುಕೊಂಡಿದ್ದಾರೆ. ಹೀಗೆ ಬೇರೆ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡಿರುವುದರಿಂದ ಅವರಿಂದ ಸರಿಯಾಗಿ ಕೆಲಸವಾಗುವುದಿಲ್ಲ. ನಾನು ಅಲ್ಲಿ ಆಗತಕ್ಕಂಥಾ ಒಂದು ಅನುಭವದಿಂದಲೇ ಈ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ ಅಲ್ಲಿ ಎಸ್.ಇ.ಓ. ಏನು ಇದ್ದಾರೆ ಅವರಿಗೆ ಅಲ್ಲೇ ೨೫–೨೬ ವರ್ಷಗಳಿಂದಲೂ ಕೆಲಸ ಮಾಡುತ್ತಾ ಇರುವುದರಿಂದ, ಅವರಿಗೆ ಅಲ್ಲಿ ಅನುಭವ ಚೆನ್ನಾಗಿ ಇರುವುದರಿಂದ ಅವರಿಗೇನೇ ಪ್ರಮೋಷನ್ ಕೊಟ್ಟು ಬಿ.ಡಿ.ಓ. ಆಗಿ ಮಾಡ ಬೇಕು ಎಂದು ಹೇಳುತ್ತೇನೆ. ಇದರಿಂದ ಅಲ್ಲಿ ಕೆಲಸವೂ ಕೂಡ ಚೆನ್ನಾಗಿ ನಡೆಯುತ್ತದೆ. ಎರಡನೆಯದಾಗಿ ಹೇಳುವುದೇನೆಂದರೆ ಈಗ ನಮ್ಮ ರಾಜ್ಯದಲ್ಲಿ ೭೪೪ ಹೋಬಳಿಗಳಿಗೆ ಮಾತ್ರ ತಾವು ಗ್ರಾಮಸೇವಕರನ್ನು ನೇಮಕ ಮಾಡಿದ್ದೀರಿ. ಅದೂ ಸಾಲುವುದಿಲ್ಲ. ಆದುದರಿಂದ ತಾವು ಎಲ್ಲಾ ಗ್ರಾಮಗಳಿಗೂ ಕೂಡ ಗ್ರಾಮಸೇವಕರನ್ನು ಅಪಾಯಿಂಟ್ ಮಾಡಬೇಕು ಎಂದು ಹೇಳುತ್ತೇನೆ. ಹೆಚ್ಚು ಹೆಚ್ಚು ಗ್ರಾಮಸೇವಕ ರನ್ನು ಅಪಾಯಿಂಟ್ ಮಾಡಿದರೆ ಅಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಮಾಡುತ್ತೀರಾ?

ಶ್ರೀ ಬಿ. ರಾಮಯ್ಯ.—ಶ್ರೀಮಾನ್ ರೆಡ್ಡಿಯವರು ಈ ಬಗ್ಗೆ ಏನು ಒಂದು ಸಲಹೆಯನ್ನು ಕೊಟ್ಟಿದ್ದಾರೆ ನಾವೂ ಕೂಡ ಆ ದಿಶೆಯಲ್ಲೇ ಚಿಂತನೆ ಮಾಡುತ್ತಿದ್ದೇವೆ. ಮೊದಲು ಇದರಲ್ಲಿ ವಿ.ಎಲ್.ಡಬ್ಲ್ಯು. ಎಸ್. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಅವರು ಆ ಗ್ರಾಮದ ಅಭಿವೃದ್ಧಿ ಕೆಲಸಕಾರ್ಯ ಗಳನ್ನು ಚೆನ್ನಾಗಿ ಮಾಡಿಸುತ್ತಿದ್ದರು, ಅವರಿಗೆ ಇವರು ಮೂಲ ಪರಿಚಯವೂ ಸಹ ಇತ್ತು. ಅವರು ತಮ್ಮ ಒಂದು ವ್ಯಾಪ್ತಿಯಲ್ಲಿ ಈ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದರು. ಆಮೇಲೆ ಅವರನ್ನು ಅವರ ಮದರ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿಬಿಟ್ಟರು. ಅವರನ್ನು ಬೇರೆ ಅವರವರ ಇಲಾಖೆಗಳಿಗೆ ಕಳುಹಿಸಿದ ಮೇಲೆ ನಂತರ ಇದರಲ್ಲಿ ಯಾವ ರೀತಿ ಕೆಲಸ ನಡೆಯುತ್ತಾ ಇದೆ, ಒಂದೊಂದು ಹೋಬಳಿ ಯಲ್ಲೂ ಕೂಡ ಇದರ ಪರಿಣಾಮ ಏನಾಗಿದೆ ಅನ್ನುವುದನ್ನು ಅನೇಕ ಸದಸ್ಯರು ತಿಳಿಸಿದ್ದಾರೆ. ಈ ದಿಶೆ ಯಲ್ಲಿ ನಾವೂ ಕೂಡ ಪರಿಶೀಲಿಸುತ್ತಿದ್ದೇವೆ. ಅದನ್ನು ಸರಿಪಡಿಸುವುದಕ್ಕೆ ಏನೂ ಮಾಡಬೇಕೋ ಆರೀತಿ ಯಲ್ಲಿ ಪ್ರಯತ್ನ ಮಾಡುತ್ತೇನೆ.

ಮಾನ್ಯ ಸದಸ್ಯರು ಇನ್ನೊಂದು ವಿಷಯ ಹೇಳಿದರು. ಅದು ಯಾವ ವಿಷಯ ಎಂದರೆ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಎಸ್.ಇ.ಓ.ಗೆ ಪ್ರಮೋಷನ್ ಕೊಟ್ಟು ಬಿ.ಡಿ.ಓ. ಆಗಿ ಏತಕ್ಕೆ ಮಾಡಬಾರದು, ಹೊರಗಡೆಯಿಂದ ಏತಕ್ಕೆ ತರುತ್ತೀರಿ ಅನ್ನುವ ಮಾತನ್ನು ಹೇಳಿದರು. ಈ ಬಗ್ಗೆ ತಮಗೆ ಹೇಳಬೇಕಾದರೆ ಈ ಬಗ್ಗೆ ನಮ್ಮದೇ ಆದಂಥಾ ಒಂದು ನಿರ್ದೇಶನಾಲಯನ್ನು ಎಲ್ಲಿಯವರೆಗೆ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಕೂಡ ಈ ಸಮಸ್ಯೆಯನ್ನು ಎದುರಿಸುವುದಕ್ಕಾಗುವುದಿಲ್ಲ. ನಾವೂ ಕೂಡ ಅದೇ ಚಿಂತನೆ ಮಾಡುತ್ತಿದ್ದೇವೆ. I want to have my own Directorate .

ಶ್ರೀ ಎ.ಜಿ. ಕೊಡಗಿ.—ಈ ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂಬಗ್ಗೆ ಯಾವ ರೀತಿ ದುರುಪಯೋಗವಾಗುತ್ತಾ ಇದೆ ಎನ್ನುವ ವಿಚಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಇದು ದುರುಪಯೋಗವಾಗಲಿಕ್ಕೆ ಮೂಲ ಕಾರಣ ಸರ್ಕಾರದಲ್ಲಿರತಕ್ಕಂಥಾ ಒಂದು ಧೋರಣೆಯೇ ಕಾರಣ ಎಂದು ತಮ್ಮ ಮುಖಾಂತರ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂನಲ್ಲಿ ಕೆಲಸ ಮಾಡುವಂಥಾ ಕೆಲಸಕ್ಕೆ ಕೂಲಿಯನ್ನು ೪ ರೂಪಾಯಿನಿಂದ ೫ ರೂಪಾಯಿಗೆ ಏರಿಸಿದ್ದೀರಿ. ಈವೊತ್ತು ಬೇರೆ ಕಡೆಗಳಲ್ಲಿ ನೋಡಿದರೆ, ಅವರು ಮಾಡುವಂಥಾ ಕೆಲಸಕ್ಕೆ ೭ ರೂಪಾಯಿ, ೮ ರೂಪಾಯಿ ೧೦ ರೂಪಾಯಿ ಇದೆ, ಅವರು ಈ ೪ ರೂಪಾಯಿ ೫ ರೂಪಾಯಿ ಕೆಲಸಕ್ಕೆ ಬರುವುದಕ್ಕೆ ಸಿದ್ಧರಿಲ್ಲ. ಹೀಗಿರುವುದರಿಂದ ಏನು ಮಾಡಬೇಕು ಎಂದರೆ ಲೆಕ್ಕದಲ್ಲಿ ಏನಾದರೂ ಕೂಡ ಹೆಚ್ಚು ಕಡಿಮೆ ಮಾಡಿ ತೋರಿಸಬೇಕಾಗುತ್ತದೆ, ಅನೇಕ ಕಡೆಗಳಲ್ಲಿ ಈ ರೀತಿ ಮಾಡಿದ್ದಾರೆ, ಅದು ತಮ್ಮ ಗಮನಕ್ಕೂ ಕೂಡ ಬಂದಿದೆ. ಅಧಿಕಾರಿಗಳು ಈ ಕೆಲಸ ಮಾಡುವುದರಲ್ಲಿ ವಂಚನೆ ಮಾಡಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಈ ಸ್ಕೀಂನಿಂದ ಅನೇಕ ಕಡೆಗಳಲ್ಲಿ ವಂಚನೆಯಾಗಿರುವುದು ತಮ್ಮ ಗಮನಕ್ಕೆ

ಆಹಾರ ಧಾನ್ಯ ಎಂದು ಹೇಳುವುದಕ್ಕಾಗುವುದಿಲ್ಲ. ಅಂಥಾದ್ದೇನಾದರೂ ಇದ್ದರೆ ಪರಿಶೀಲಿಸಿ ಸರಿಪಡಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ರಾಮಯ್ಯನವರು ಇಡೀ ದೇಶಕ್ಕೆ ಒಳ್ಳೆಯ ಕೆಲಸ ಮಾಡಿದರೆ ನಾನು ಸ್ವಾಗತ ಮಾಡುತ್ತೇನೆ. ಅಂದರೆ ಸರ್ಕಾರಕ್ಕೆ ಒಂದೇ ಪಾಲಿಸಿ ಇರಬೇಕು. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದು ಈಗ ಏನು ಅಧಿಕಾರ ಇದೆಯೋ ಈ ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಹೇಳುತ್ತೇನೆ. ಅಶೋಕ ಮೆಹತಾರವರು ಮತ್ತು ಇನ್ನೂ ಅನೇಕ ತಜ್ಞರೂ ಕೂಡ ಇದೇ ಅಭಿಪ್ರಾಯ ಪಟ್ಟಿದ್ದಾರೆ, ಆದುದರಿಂದ ನಾನೂ ಕೂಡ ಒತ್ತಾಯ ಮಾಡುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ದಿವಸ ಪಂಚಾಯಿತಿ ರಾಜ್ಯ ಮತ್ತು ತಾಲ್ಲೂಕ್‌ಬೋರ್ಡ್‌ನ ಒಂದು ಪರಿಸ್ಥಿತಿ ನೋಡಿದರೆ ಈವೊತ್ತು ನಮ್ಮ ಕರ್ನಾಟಕದಲ್ಲಿ ಯಾವ ಒಂದು ಪಂಚಾಯಿತಿ ರಾಜ್ಯ ಇಲ್ಲ ಎಂದು ಹೇಳಿದ್ದಾರೆ. ಈವೊತ್ತಿನ ದಿವಸ ಪಂಚಾಯಿತಿಗಳಲ್ಲಿ ಎಲೆಕ್ಟ್ರಿಸಿಟಿ ಬಿಲ್ ೫೦ ಪರ್ಸೆಂಟ್ ಅಷ್ಟು ಹಣವನ್ನು ಕಟ್ಟುವುದಕ್ಕೂ ಕೂಡ ಫೈಲ್ಯೂರ್ ಆಗಿದೆ, ನೀವು ಬೇರೆ ೫೦ ಪರ್ಸೆಂಟ್ ಅವರಿಗೆ ಕೊಡುತ್ತೀರಿ ಇದಕ್ಕಾಗಿ ೨೦ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಆದರೂ ಸಹ ಪ್ರಾಬ್ಲೆಮ್ ಸಾಲ್ವ್ ಆಗುವುದಿಲ್ಲ. ಆದುದರಿಂದ ನಾನು ತಮ್ಮನ್ನು ಕೇಳುವುದೇನೆಂದರೆ ರಾಜ್ಯ ಸರ್ಕಾರಕ್ಕೆ ಬರತಕ್ಕಂಥಾ ಉತ್ಪತ್ತಿಯಲ್ಲಿ ೫೦ ಭಾಗದಷ್ಟು ಹಣವನ್ನು ನಿಮ್ಮ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಏತಕ್ಕೆ ಕೊಡಬಾರದು. ಮಹಾರಾಷ್ಟ್ರದಲ್ಲಿ ಈ ರೀತಿಯಾಗಿ ಅಧಿಕಾರ ವಿಕೇಂದ್ರೀಕರಣ ಮಾಡಿರುವುದರಿಂದ ಅಲ್ಲಿ ಜಿಲ್ಲಾ ಪರಿಷತ್ತುಗಳು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಅಲ್ಲಿಯ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದಾರೆ. ಆ ಒಂದು ಕಾನೂನು ಆ ಒಂದು ಧೈರ್ಯ ನೀವು ಇಲ್ಲಿ ಮಾಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಈವೊತ್ತು ನಮ್ಮ ಬೀದರ್‌ಗೆ ಒಂದು ಕುಡಿಯುವ ನೀರು ಬೇಕಾದರೆ ೫೦೦ ಮೈಲಿಯಿಂದ ಬೆಂಗಳೂರಿಗೆ ಬಂದು ನಿಮ್ಮನ್ನು ಕೇಳಬೇಕಾಗುತ್ತದೆ. ಅಷ್ಟೇ ಅಲ್ಲ ಯಾವುದಾದರೂ ಒಂದು ಪತ್ರ ನಾವು ಬರೆದರೆ ಒಂದು ತಿಂಗಳಾದರೂ ಉತ್ತರ ಬರುವುದಿಲ್ಲ, ಯಾವುದಾದರೂ ಒಂದು ರೆಪ್ರೆಸೆಂಟೇಷನ್ ನಮ್ಮ ಭಾಗದವರು ಕೊಟ್ಟರೆ ಒಂದು ವರ್ಷವಾದರೂ ಕೂಡ ಅದಕ್ಕೆ ಉತ್ತರ ಬರುವುದಿಲ್ಲ. ಮಾನ್ಯ ಪ್ರಭಾಕರ್‌ರವರು ಮಂತ್ರಿಯಾಗಿದ್ದಾಗ ನಮ್ಮ ತಾಲ್ಲೂಕು ಬೋರ್ಡ್‌ನವರು ಈ ಕುಡಿಯುವ ನೀರಿನ ಸಲುವಾಗಿ ಒಂದು ಪತ್ರ ಬರೆದರು. ಅದಕ್ಕೆ ಒಂದು ವರ್ಷವಾದರೂ ಕೂಡ ಉತ್ತರ ಬರಲಿಲ್ಲ. ಈ ಕಾರಣದಿಂದ ನಮಗೆ ಹೋದವರ್ಷ ನಮ್ಮ ಬೀದರ್ ಜಿಲ್ಲೆಯ ೪ ತಾಲ್ಲೂಕುಗಳಿಗೆ ನೀರೇ ಸಿಕ್ಕಲಿಲ್ಲಾ. ಅವರಿಗೆ ಇದಕ್ಕಾಗಿ ಹಣವನ್ನೂ ಕೊಡುವುದಿಲ್ಲ. ವೇಳೆಗೆ ಸರಿಯಾಗಿ ಕೆಲಸವನ್ನು ಮಾಡಿಕೊಡುವುದಿಲ್ಲ, ಹೀಗಾಗಿ ಅವರಿಗೆ ನೀರೇ ಸಿಕ್ಕುವುದಿಲ್ಲ. ಈ ಕಾರಣದಿಂದ ನಾನು ಹೇಳುವುದು Are you prepared to bring in a resolution here to de-centralize the powers to panchayats and give financial powers and authorsty and 50% of the income of the State?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮಾಡಿ ಅದಕ್ಕೆ ಬೇಕಾದಂಥಾ ಆರ್ಥಿಕ ಒಂದು ಪರಿಸ್ಥಿತಿಯನ್ನು ಕೂಡ ಮಾಡಿಕೊಳ್ಳುವ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಈ ದಿಶೆಯಲ್ಲಿ ಸರ್ಕಾರವೂ ಕೂಡ ಯೋಚನೆ ಮಾಡುತ್ತಾ ಇವೆ ಎನ್ನುವ ವಿಷಯವನ್ನು ಹೇಳಬಯಸುತ್ತೇನೆ.

ಶ್ರೀ ಬಿ ಎ. ಮೊಹಿದ್ದೀನ್.—ಸ್ವಾಮಿ, ಈ ವರದಿಯಲ್ಲಿ ಹರಿಜನ ಮತ್ತು ಗಿರಿಜನ ಅಭಿವೃದ್ಧಿಗಾಗಿ ೨.೭೩ ಕೋಟಿ ರೂ.ಗಳನ್ನು ಮೀಸಲ್ಪಟ್ಟಿದ್ದರೂ ಸಹ ೧೯೭೯-೮೦ರಲ್ಲಿ ಖರ್ಚು ಆಗಿರುವುದು ಕೇವಲ ೧.೪೦ ಕೋಟಿ ರೂ.ಗಳು ಮಾತ್ರ. ಇನ್ನು ೧.೩೩ ಕೋಟಿ ರೂ ಗಳು ಉಳಿದಿದೆ. ಹಣವೆಲ್ಲಾ ಅಕ್ಯುಮಲೇಟ್ ಆಗಿದೆ. ಕೆಲವು ಕಡೆಗಳಲ್ಲಿ ಈ ಹಣ ಸರಿಯಾಗಿ ಉಪಯೋಗ ಆಗಿಲ್ಲ. ದುರುಪಯೋಗವಾಗಿದೆ. ಮುಖ್ಯವಾಗಿ ಸರ್ಕಾರದ ಆದೇಶದ ಪ್ರಕಾರ ನಡೆದುಕೊಳ್ಳದೆ ತಾಲ್ಲೂಕ್ ಬೋರ್ಡುಗಳ ಮೇಲೆ ಹಾಗೂ ವಿಲೇಜ್ ಪಂಚಾಯಿತಿಗಳ ಮೇಲೆ ಏನು ಕ್ರಮ ಕೈಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು?

ಬಂದಿದೆ. ಆದುದರಿಂದ ಈ ಸ್ಕೀಂ ಬಗ್ಗೆ ಅಮೂಲಾಗ್ರವಾಗಿ ಬದಲಾವಣೆ ಮಾಡಿ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಅಲ್ಲಿ ಕೆಲಸ ಮಾಡುವಂಥಾ ಜನರಿಗೆ ಹೆಚ್ಚು ಸಂಬಳವನ್ನು ಕೊಟ್ಟು, ಈಗ ಯಾವ ಒಂದು ಏಜನ್ಸಿ ಮಾಡಿದ್ದೀರಾ ಅದು ಬಿಟ್ಟು ಬೇರೆ ಏಜನ್ಸಿ ಹಾಕುತ್ತೀರಾ?

ಇನ್ನು ಈ ಯೋಜನೆಗಳಲ್ಲಿ ಒದಗಿಸತಕ್ಕಂಥಾ ಆಹಾರ ಪದಾರ್ಥಗಳನ್ನು ನೋಡಿದರೆ ತುಂಬಾ ಕಳಪೆಯಾದ ಆಹಾರ ಪಧಾರ್ಥಗಳನ್ನು ಒದಗಿಸಿದ್ದೀರಿ. ಅದನ್ನು ಮನುಷ್ಯರಾದವರು ತಿನ್ನುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಈ ಬಗ್ಗೆ ಒದಗಿಸಿರುವ ಆಹಾರಪದಾರ್ಥವನ್ನು ನಾನು ನೋಡಿದ್ದೇನೆ. ಈ ಕೆಲಸಕ್ಕೆ ಮೋಸ ಮಾಡುವ ದೃಷ್ಟಿಯಿಂದ ಜನ ಮುಂದೆ ಬರುತ್ತಾರೇ ವಿನಾ ಒಳ್ಳೆಯ ಉದ್ದೇಶದಿಂದ ಕೆಲಸ ಮಾಡಬೇಕು ಅಂತ ಅವರು ಬರುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಉತ್ತಮವಾದ ಮಟ್ಟದಲ್ಲಿ ಆಹಾರಪದಾರ್ಥಗಳನ್ನು ಒದಗಿಸಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಈ ಬಗ್ಗೆ ವ್ಯಕ್ತಪಡಿಸಿರುವ ಆತಂಕವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇವೆರಡು ಯೋಜನೆಯನ್ನು ತಂದಿರತಕ್ಕಂಥಾ ಹಿನ್ನೆಲೆಯೇ ಬೇರೆ ಇದೆ. ಇನ್ನು ಯೋಜನೆಗೆ ಹೆಚ್ಚು ಹಣ ಕೊಡಬೇಕೆಂದು ಹೇಳಿದ್ದಾರೆ. ನಮ್ಮ ಉದ್ದೇಶ ಈ ಗ್ರಾಮಾಂತರ ಪ್ರದೇಶದಲ್ಲಿ ಸುಗ್ಗಿ ಕೆಲಸ ಮುಗಿದ ನಂತರ ಎಲ್ಲಾ ಕೆಲಸ ಆದಮೇಲೆ ಬಿಡುವಿನ ವೇಳೆಯಲ್ಲಿ ಆ ಊರಿನವರೇ ಈ ಕೆಲಸ ಮಾಡಿ ಸ್ವಲ್ಪ ಸಂಪಾದನೆ ಮಾಡಿಕೊಳ್ಳಲು ಕರ್ನಾಟಕ ಸರ್ಕಾರದವರು ಈ ಒಂದು ಉತ್ತಮವಾದ ಯೋಜನೆಯನ್ನು ತಂದಿದ್ದಾರೆ. ಹೊರಗಡೆಯವರನ್ನು ತಂದು ಇಲ್ಲಿ ಕೆಲಸ ಮಾಡಿಸಬೇಕು ಅನ್ನುವ ಉದ್ದೇಶ ಇಲ್ಲ. ಆ ಊರಿನವರು ಬಿಡುವಿನ ಟೈಂನಲ್ಲಿ ಈ ಕೆಲಸ ಏನು ಮಾಡುತ್ತಾರೊ ಅದು ನಮ್ಮ ಮನೆ ಕೆಲಸ ಎಂದು ತಿಳಿದುಕೊಂಡು ಸ್ವಲ್ಪ ದುಡ್ಡನ್ನು ಕೂಡ ಸಂಪಾದನೆ ಮಾಡಿಕೊಳ್ಳುತ್ತಾರೇ ವಿನಹ ಈ ಕೆಲಸ ಬೇರೆಯವರ ಕೆಲಸ ಎಂದು ಅವರ ಮನಸ್ಸಿನಲ್ಲಿರಬಾರದು ಎಂದು ಹೇಳುತ್ತೇನೆ. ಒಂದೇ ಊರಿನಲ್ಲಿ ಏನಾದರೂ ಕೆಲಸ ಮಾಡಿಸಬೇಕಾದರೆ ಬೇರೆ ಊರಿನಿಂದ ಜನರನ್ನು ಕರೆದುಕೊಂಡು ಆ ಕೆಲಸ ಮಾಡಿಸಿದರೆ ಒಂದು ದಿವಸ ಆಗಬಹುದು ಪ್ರತಿದಿವಸವೂ ಆಗುವುದಿಲ್ಲ. ಪ್ರತಿ ದಿವಸವೂ ಹೊರಗಡೆಯವರನ್ನು ಕರೆದುಕೊಂಡು ಬರುವುದಿಕ್ಕಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರಾಜಕಾರಿಣಿಗಳು ಆ ಕೆಲಸಗಳನ್ನು ನೋಡಿ ಪರಸ್ಪರ ಒಬ್ಬರನ್ನೊಬ್ಬರನ್ನು ಭೇಟಿ ಮಾಡಿ ಇದು ಒಂದು ಒಳ್ಳೆಯ ಯೋಜನೆ ಎಂದು ಅವರೂ ಸಹ ಇದನ್ನು ಸ್ವಾಗತಿಸಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ನೈರ್ಮಲ್ಯ ಕೆಲಸ ಮಾಡುವುದು, ಸ್ವಚ್ಛತೆ ಕೆಲಸ ಮಾಡುವುದು, ಕೆರೆಗಳ ಹೂಳುಗಳನ್ನು ತೆಗೆಯುವುದು ಇವೆಲ್ಲ ಆ ಊರಿನ ಜನಗಳಿಗೆ ಅಳವಡಿಸಿಕೊಂಡು ಈ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇದಕ್ಕೆ ನಾವು ಅವರಿಗೆ ಕೊಡತಕ್ಕಂಥಾ ಕೂಲಿ ಮೊದಲು ೪ ರೂಪಾಯಿ ಇತ್ತು, ಈಗ ಇನ್ನು ಒಂದು ರೂಪಾಯಿ ಹೆಚ್ಚಿಸಿ ಒಟ್ಟು ೫ ರೂಪಾಯಿ ಕೊಡುತ್ತಾ ಇದ್ದೇವೆ. ಇತ್ತೀಚಿನ ದಿನಗಳಲ್ಲಿ ಆಹಾರದ ಪದಾರ್ಥಗಳು ಕೊರತೆ ಬಂದು ಹೆಚ್ಚು ಬೆಲೆ ಕೊಡಬೇಕಾಗಿದ್ದುದರಿಂದ ನಮಗೆ ನೀವು ಕೊಡತಕ್ಕಂಥಾದ್ದು ಸಾಲದು ಎಂದು ಅವರು ಕೇಳಿಕೊಂಡಿದ್ದರಿಂದ ಒಂದು ರೂಪಾಯಿ ಜಾಸ್ತಿ ಮಾಡಿದ್ದೇವೆ. ನೀವು ಹೊರಗಡೆಯಲ್ಲಿ ೭ ೮ ರೂಪಾಯಿ ಸಂಬಳ ಕೊಡುತ್ತಾರೆ, ಇಲ್ಲಿ ಕೊಡುವುದು ಕಡಿಮೆ ಎಂದರೆ ನಿಮ್ಮ ಜೊತೆಗೆ ದಿನಾಲೂ ಹೊರಗಡೆಯಿಂದ ಯಾರು ಬರುತ್ತಾರೆ ಹೇಳಿ. ಅಲ್ಲದೆ ಆ ಜನಗಳೂ ಕೂಡ ದಿನಾಲೂ ಹೊರಗಡೆಯಿಂದ ಕರೆದುಕೊಂಡು ಬಂದು ಈ ಸಂಬಳವನ್ನು ಕೊಟ್ಟು ಮಾಡಿಸುವುದಕ್ಕಾಗುತ್ತದೆಯೇ? ಇದು ಬಿಡುವಿನ ವೇಳೆಯಲ್ಲಿ ಆ ಊರಿನವರೇ ಇದು ನಮ್ಮ ಮನೆ ಕೆಲಸ ಎಂದು ತಿಳಿದು ಮಾಡತಕ್ಕಂಥಾ ಕೆಲಸ. ಬೇರೆಯವರಿಗೆ ಉತ್ತೇಜನ ಕೊಡವ ಬದಲು ಆ ಊರಿನವರಿಗೇನೇ ಒಂದು ಉತ್ತೇಜನ ಕೊಟ್ಟು ಮಾಡಿಸುವಂಥಾ ಕೆಲಸ. ಆದುದರಿಂದ ಇದಕ್ಕೆ ಇನ್ನೂ ಸಂಬಳವನ್ನು ಕೊಟ್ಟು ಮಾಡಿಸುವಂಥಾ ಕೆಲಸವಲ್ಲ. ನಾವು ಅವರು ಬಿಡುವಿನ ವೇಳೆಯಲ್ಲಿ ಮಾಡುವಂಥಾ ಕೆಲಸಕ್ಕೆ ಇದು ಒಂದು ಸಹಾಯ ಧನ ಅಷ್ಟೆ.

ಇನ್ನು ಆಹಾರ ಧಾನ್ಯಗಳ ಬಗ್ಗೆ ಮಾನ್ಯ ಸದಸ್ಯರು ಕಳಪೆ ಆಹಾರವನ್ನು ಕೊಡುತ್ತಿದ್ದಾರೆ ಅನ್ನುವ ಮಾತನ್ನು ಹೇಳಿದ್ದಾರೆ. ಕೆಲವು ಕಡೆ ಉತ್ತಮವಾದ ಕಾಳನ್ನು ಕೊಟ್ಟಿದ್ದೇವೆ. ಹಾಗಾದರೆ ಅಕ್ಕಿಯಲ್ಲಿ ಎಷ್ಟೋ ತರಹ ಇದೆ, ದಪ್ಪ ಅಕ್ಕಿ ಸಣ್ಣ ಅಂಥಾ ಇಂಥಾ ಅಕ್ಕಿ ಅಂತ ಇದೆ, ಹಾಗೆಯೇ ರಾಗಿ ಜೋಳದಲ್ಲೇ ಇದೆ. ಒಂದಕ್ಕೊಂದಕ್ಕ ವ್ಯತ್ಯಾಸ ಇರಬಹುದು. ಅಷ್ಟು ಇದ್ದ ಮಾತ್ರಕ್ಕೆ ಇದು ಕಳಪೆ

ಶ್ರೀ ಬಿ. ರಾಮಯ್ಯ.—ನೆನ್ನೆ ದಿವಸ ಇದೇ ವಿಚಾರದಲ್ಲಿ ಮಾನ್ಯ ಶಿವನಂಜಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಈ ೧೮ ಪರ್ಸೆಂಟ್ ಹಣವನ್ನು ಯಾವ ಯಾವ ಬಾಬುಗಳಿಗೆ ಖರ್ಚು ಮಾಡಬೇಕೆಂದು ಅವರಿಗೆ ಆದೇಶ ಕೊಟ್ಟಿದ್ದೇನೆ. ಆದರ ಪ್ರಕಾರ ಅವರು ಖರ್ಚು ಮಾಡುತ್ತಾರೆ. ಒಂದು ವೇಳೆ ಹಣ ದುರುಪಯೋಗವಾಗಿದೆ ಎಂಬುದು ಮಾನ್ಯ ಸದಸ್ಯರ ವಾದವಾದರೆ ಎಲ್ಲಿ ಆಗಿದೆ ಎಂಬುದನ್ನು ಅವರು ಬರೆದು ತಿಳಿಸಿದರೆ ನಾವು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ವಿ ಎಂ. ಥಾಡಿ.— ಮಾನ್ಯ ರಾಮಕೃಷ್ಣ ಹೆಗಡೆಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಕೆಲವು ತಾಲ್ಲೂಕ್‌ಬೋರ್ಡುಗಳಿಗೆ ಹೆಚ್ಚಿನ ಹಣ ಕೊಟ್ಟರೆಂದು ಮಾನ್ಯ ಪಟೇಲ್ ಅವರು ಹೇಳಿದರು. ಆದರೆ ನಮ್ಮ ಭಾಗದಲ್ಲಿ ಶೇಕಡಾ ೯೦ ರಷ್ಟು ಕಾಡು ಇರುವುದರಿಂದ ಅದರಿಂದ ಬರುವ ವರಮಾನದಲ್ಲಿ ಶೇಕಡಾ ಎರಡಷ್ಟನ್ನು ಸ್ಥಳೀಯ ಸಂಸ್ಥೆಗಳಿಗೆ ಬ್ರಿಟೀಷ್‌ನವರ ಕಾಲದಿಂದಲೂ ಕೊಟ್ಟುಕೊಂಡು ಬಂದಿದ್ದಾರೆ. ಅಲ್ಲಿ ಶೇಕಡಾ ಹತ್ತರಷ್ಟು ಮಾತ್ರ ರೆವಿನ್ಯೂ ಲ್ಯಾಂಡ್ ಇರುವುದು ಮತ್ತು ಜನವಸತಿಯನ್ನು ಗಣನೆಗೆ ತೆಗೆದುಕೊಂಡರೆ ಒಬ್ಬರಿಗೆ ೭ ಗುಂಟೆ ಜಮೀನೂ ಸಹ ಸಿಗುವುದಿಲ್ಲ. ಅಲ್ಲಿ ಲ್ಯಾಂಡ್ ರೆವಿನ್ಯೂ ಸಹ ೨೫ ಪೈಸೆಯಿಂದ ೫೦ ಪೈಸೆವರೆಗೆ ಇತ್ತು, ಆದಕಾರಣ ಆ ಭಾಗಕ್ಕೆ ಹೆಚ್ಚು ಸಹಾಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ರಸ್ತೆಗಳ ರಿಪೇರಿ ಮಾಡಿಸಲು ಹೆಚ್ಚು ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ಜೂನಿಯರ್ ಇಂಜಿನಿಯರನ್ನು ಈಗ ಚೀಫ್-ಇಂಜಿನಿಯರ್ ಕಛೇರಿಯಿಂದ ಕರೆಸಿಕೊಳ್ಳುವುದಕ್ಕೆ ಅವಕಾಶವಿದೆ. ಅದಕ್ಕೆ ಬದಲು ತಾಲ್ಲೂಕ್‌ಬೋರ್ಡಿನವರೇ ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು.

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಮೊದಲನೆ ಪ್ರಶ್ನೆಗೆ ಮೊನ್ನೆದಿವಸ ಮುಖ್ಯಮಂತ್ರಿಗಳೇ ಉತ್ತರ ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಜಾಸ್ತಿ ಇರುವ ಕಾರಣದಿಂದ ಅದರಿಂದ ಬರುವ ವರಮಾನದಲ್ಲಿ ಒಂದು ಭಾಗವನ್ನು ಬ್ರಿಟೀಷ್‌ನವರು ಸಹ ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಿದ್ದರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಇದೇ ವಿಚಾರದಲ್ಲಿ ಮಾನ್ಯ ಜೆ.ಎಚ್. ಪಟೇಲರು ಹೇಳಿದ್ದನ್ನು ಸಹ ನಾನು ಕೇಳಿದ್ದೇನೆ. ಮಾನ್ಯ ಪಟೇಲ್ ಅವರು ಉತ್ತರ ಕನ್ನಡ ಜಿಲ್ಲೆಗೆ ಕೊಡುತ್ತಿರುವ ವಿಶೇಷ ಸೌಲಭ್ಯವನ್ನು ಎಲ್ಲ ಮಲೆನಾಡು ಪ್ರದೇಶಗಳಿಗೂ ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದಕಾರಣ ಈ ವಿಚಾರವನ್ನು ಪರಿಶೀಲನೆ ಮಾಡುವುದಾಗಿ ಈಗಾಗಲೇ ಹೇಳಿದ್ದೇನೆ.

MR. SPEAKER.—I shall now put the Demands to vote. The question is ;

"That the respective sums not exceeding the amounts mentioned in the list of demands inclusive of amounts granted on account be granted to the Government to defray the charges which will come in course of payment during the financial year for the period ending 31st day of March 1981 in respect of Demands No. 56, 57 and 58".

The Motion was adopted and the sums were granted.

As directed by the Chair the Demands for grant adopted by the House are reproduced below):—

RURAL WATER SUPPLY AND SANITATION

"That a sum not exceeding Rs. 22,05,50,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending

31st day of March 1981 in respect of Demand No. 56 "Rural Water Supply and Sanitation".

COMMUNITY DEVELOPMENT

"That a sum not exceeding Rs 20,39,58,000 on Revenue Account and Rs. 9,00,000 on Capital Account inclusive of the sum 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 57 "Community Development".

INTEGRATED RURAL DEVELOPMENT PROGRAMME

" That a sum not exceeding Rs. 22,58,14,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 58 Integrated Rural Development Programmes".

Discussion and Voting of the demands for grants for the year 1980-1981.

DEMAND NOS :

5, 8, 6. 21, 32, 33, 11, 43, 44, 45, 47, 46, 22, 24, 26, 25, 12, 36, 37, 38, 39 and 40.

SRI R. GUNDU RAO. (Chief Minister)

INDUSTRIES

(EXCLUDING SMALL SCALE INDU4TEIES AND SERICULTURE

Sir, on the recommendation of the Governor, I beg to move ;

"That a sum not exceeding Rs. 19,72,43,000 on Revenue Account and Rs. 15,41,4 ,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 5 "Industries, (Excluding Small Scale Industries and Sericulture)".

MINES AND GEOLOGY

Sir, on the recommendation of the Governor, I beg to move :

"That a sum not exceeding Rs. 3,07,82,000 on Revenue Account inclusive of the sum granted 'on account' be granted